ವುದು ಮತ್ತು ಯತಿಶ್ರೇಷ್ಠರ ಸೇವೆ-ಸುಶ್ರೂಷೆಮಾಡಿರುವ ಮಾನವನು ಪರ ಲೋಕದಲ್ಲಿ ಸಕಲ ವ್ಯವಹಾರಕಾರ್ಯಗಳಲ್ಲಿ ಮಹಾ ನಿಪುಣನಾಗುತ್ತಾನೆ.

ಭಾವಾರ್ಥ :- ವ್ಯವಹಾರ ಚತುರನಾಗುವುದು ಬುದ್ಧಿವಂತಿಕೆಯ ಕಾರ್ಯವಾಗಿದೆ. ಯಾರು ಬುದ್ಧಿವಂತರನ್ನು, ಕಲಾಕೋವಿದರನ್ನು, ಜ್ಞಾನಿಗಳನ್ನು ಮತ್ತು ವಿಚಾರಶೀಲರಾದವರನ್ನು ಕಂಡು ಆನಂದಭರಿತನಾಗುತ್ತಾನೆಯೊ, ಚತುಃಸಂಘ ಸೇವೆಮಾಡುತ್ತಲೂ, ಧರ್ಮಾಚರಣೆಗಳನ್ನು ಧಾರಣೆ ಮಾಡುತ್ತಲೂ ಇದ್ದ ಮಾನವನು ಪರಲೋಕದಲ್ಲಿ ಜನಿಸಿ ಸರ್ವ ವ್ಯವಹಾರ ಕಾರ್ಯಗಳಲ್ಲಿ ನಿಪುಣನಾಗುತ್ತಾನೆ.

ಮುಂದಕ್ಕೆ ಕವಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸುಕಾವ್ಯಕರ್ತಾ ಹಿ ಭವೇತೇ ಕವಿಃ ಕೌ ॥

ಅರ್ಥ :- ಹೇ ದಯಾಸಾಗರನೇ ! ಈ ಜೀವನು ಯಾವಯಾವ ಪುಣ್ಯ ಕಾರ್ಯಗಳನ್ನು ಮಾಡಿರುವ ಸತ್ಫಲವಾಗಿ ಉತ್ತಮ ಕಾವ್ಯಗಳನ್ನು ರಚಿಸುವ ಸತ್ಕವಿಯಾಗಿ ಜನಿಸುವನೆಂಬುದನ್ನು ವಿವರಿಸಬೇಕು.

ಉತ್ತರ :- ನಿರ್ದೋಷ ದೇವಾದಿ ಕಥಾಪ್ರಶಂಸಾ ।
ಸುಕಾವ್ಯಕರ್ತುರ್ಗುಣಕೀರ್ತನಾದಿಃ ॥
ಪರಂಪರಾಧರ್ಮಗುರೋಃ ಕೃತಾ ಯೈ ।
ರ್ಭವಂತಿ ಮೃತ್ವಾ ಕವಯೋವರಾಸ್ತೇ ॥೧೭೩॥

ಅರ್ಥ :- ವೀತರಾಗ ಸರ್ವಜ್ಞದೇವನ ಕಥೆಯನ್ನು ಹೇಳುವುದು, ಸ್ತುತಿಸುವುದು, ಉತ್ತಮ ಚಾರಿತ್ರಗಳನ್ನು ವರ್ಣಿಸುವ ಶ್ರೇಷ್ಠ ಕವಿಗಳ ಗುಣಗಳನ್ನು ಬಾಯಿತುಂಬ ಹೊಗಳುವುದು ಮತ್ತು ಪರಂಪರಾನುಗತವಾಗಿ ಬಂದಿರುವ ಧರ್ಮಗುರುಗಳ ಗುಣಗಳನ್ನು ವಿವರ್ಣಿಸುವುದು ಇವೇ ಮೊದಲಾದ ಸತ್ಕಾರ್ಯಗಳನ್ನು ಮಾಡಿರುವ ಮಾನವನು ಸತ್ತು ಪರಲೋಕದಲ್ಲಿ ಮಾನವ ಶ್ರೇಷ್ಠ ಕವಿಯಾಗಿಯೇ ಪ್ರಸಿದ್ಧನಾಗುವನು.



ಭಾವಾರ್ಥ :- ಧರ್ಮಕಥೆಗಳನ್ನು ನಿರೂಪಿಸುವವನೇ ಉತ್ತಮ ಕವಿಯೆಂದು ಹೇಳಿಸಿಕೊಳ್ಳಲು ಅರ್ಹನು. ತೀರ್ಥಂಕರ ಪರಮದೇವರ ಪಾವನ ಚರಿತ್ರೆಗಳನ್ನು ತನ್ನ ಕಾವ್ಯಗಳ ಮೂಲಕ ವಿವರ್ಣಿಸುವುದು, ಅನ್ಯ ಮೋಕ್ಷಗಾಮಿ ಮಹಾ ಪುರುಷರ ಪವಿತ್ರ ಕಥೆಗಳನ್ನು ಹೃದಯಂಗಮವಾಗಿ ವರ್ಣಿಸುವುದು, ಪಾಪಕಾರ್ಯಗಳನ್ನು ತ್ಯಜಿಸಿ ಪುಣ್ಯಕಾರ್ಯಾಸಕ್ತನಾಗುವುದಕ್ಕೆ ಅನ್ಯ ಮಹಾ ಪುಣ್ಯಪುರುಷರ ಜೀವನಕಥೆಗಳನ್ನು ಹೇಳುವುದೇ ಮೊದಲಾದ ಉತ್ತಮ ವಿಚಾರವುಳ್ಳವರಿಗೆ ಉತ್ತಮ ಕವಿಯೆಂದು ಹೇಳುತ್ತಾರೆ. ಯಾರು ದೇವರಪೂಜೆ, ಗುರುಪೂಜೆ, ಶಾಸ್ತ್ರಪೂಜೆಗಳನ್ನು ಮಾಡಿಕೊಂಡಿರುವವರ ಗುಣವರ್ಣನೆ ಮಾಡುತ್ತ ತನ್ನಾತ್ಮನನ್ನು ಪವಿತ್ರಗೊಳಿಸಿಕೊಳ್ಳುವ ಜಿನಸೇನ, ಸಮಂತಭದ್ರರೇ ಮೊದಲಾದ ಆಧ್ಯಾತ್ಮ ಕವಿಪುಂಗವರನ್ನು ಪ್ರಶಂಸಿಸುವ, ಅವರ ಚರಿತ್ರೆಯನ್ನು ಪರರಿಗೆ ಉಪದೇಶಿಸುವ ಮಾನವನು ಪರಲೋಕದಲ್ಲಿ ಜನಿಸಿ ಮಹಾನ್ ಕವಿಯೆಂದೆನ್ನಿಸಿಕೊಳ್ಳುತ್ತ ಆತ್ಮಕಲ್ಯಾಣಮಾಡಿಕೊಂಡು ಎರಡೋ ನಾಲ್ಕನೆಯೋ ಭವಗಳಲ್ಲಿ ಶಾಶ್ವತಸುಖವಾದ ಮೋಕ್ಷಲಕ್ಷ್ಮಿಗೆ ಒಡೆಯರಾಗುತ್ತಾರೆ.

ಮುಂದಕ್ಕೆ ದೀರ್ಘಾಯುಷಿಯಾಗಿ ಸುಖಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ದೀರ್ಘಾಯುರೇವಾಪಿ ಸುಖೀ ಸದಾಸ್ಯಾತ್ ॥

ಅರ್ಥ :- ಹೇ ಭಗವಾನ್ ! ಈ ಜೀವನು ಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲವಾಗಿ ದೀರ್ಘಾಯುಷಿಯಾಗಿ, ಮಹಾಸುಖಿಯಾಗಿ ಆಗಲು ಕಾರಣವನ್ನು ಹೇಳಬೇಕು.

ಉತ್ತರ :- ವ್ಯಾಘ್ರೀ ಮುಖಾದ್‌ರಕ್ಷಿತ ಏವ ಜೀವೋ ।
ವಿಮೋಚಿತೋ ಬಂದಿಗೃಹಾತ್ಸುಬದ್ಧಃ ॥
ಯೇನ ಪ್ರದತ್ತಂ ವಿಮಲೌಷಧಾನ್ನಂ ।
ದೀರ್ಘಾಯುರೇವಾಪಿ ಸುಖೀಸದಾಸ್ಯಾತ್ ॥೧೭೪॥

ಅರ್ಥ :- ಹುಲಿ, ಸಿಂಹ ಮೊದಲಾದ ಕ್ರೂರ ಮೃಗಗಳ ಬಲಿಗೆ ಸಿಲುಕಿದ

ಜೀವಗಳನ್ನು ರಕ್ಷಿಸುವುದು, ಕಾರಾಗೃಹದಲ್ಲಿ ಬಂಧಿತರಾದವರನ್ನು ನಿರ್ಮುಕ್ತರನ್ನಾಗಿ ಮಾಡುವುದು, ರೋಗದಿಂದ ಪೀಡಿತರಿಗೆ ಔಷಧ, ಆಹಾರಗಳನ್ನು ಕೊಟ್ಟು ರಕ್ಷಿಸುವುದು ಇವೇ ಮೊದಲಾದ ಕಾರ್ಯಗಳನ್ನು ಮಾಡುವ ಜೀವವು ಪರಲೋಕದಲ್ಲಿ ಜನಿಸಿ ದೀರ್ಘಾಯುಷೀ ಮತ್ತು ಸುಖೀಯಾಗುವನು.

ಭಾವಾರ್ಥ :- ದೀರ್ಘಾಯುಷೀಯಾಗಿ ವೃದ್ಧಾವಸ್ಥೆಯಲ್ಲಿ ನಾನಾ ಪ್ರಕಾರದ ದುಃಖಕ್ಕೆ ಈಡಾಗುವುದು, ಪಂಚೇಂದ್ರಿಯಗಳು, ಶಿಥಿಲವಾದ ಕಿವಿಗಳು ಕೇಳದೆ, ಕಣ್ಣುಗಳು ಕಾಣದೆ, ಮತ್ತು ಸ್ಮರಣಶಕ್ತಿಯು ಹೀನವಾಗಿರುವ ಅವಸ್ಥೆಯಲ್ಲಿ ಘೋರದುಃಖಕ್ಕೆ ಗುರಿಯಾಗುವುದು ಸ್ವಾಭಾವಿಕವಾಗಿರುತ್ತದೆ. ಅಂತಹ ಜೀವಗಳನ್ನು ರಕ್ಷಿಸುವುದು, ಸುಖದಲ್ಲಿರಿಸಲು ಪ್ರಯತ್ನಿಸುವುದು ರೋಗಿಗಳಿಗೆ ಔಷಧಿಕೊಡಿಸುವುದು, ಹೊಟ್ಟೆ ಹಸಿವೆಯಿಂದ ಬಳಲಿದವರಿಗೆ ಅನ್ನಾಹಾರವನ್ನು ಕೊಡುವುದು, ಸರ್ವಜೀವಗಳಲ್ಲಿ ಮೈತ್ರೀಭಾವನೆಯಿಂದಿರುವುದು, ಇಂತಹ ಕಾರ್ಯಗಳಲ್ಲಿ ತನ್ಮಯನಾದ ಪುಣ್ಯಾತ್ಮನು ಮರಣಾನಂತರ ಪರಭವದಲ್ಲಿ ದೀರ್ಘಾಯುಷೀಯಾಗಿ ಮಹಾಸುಖೀಯಾಗುತ್ತಾನೆ.

ಮುಂದಕ್ಕೆ ಎಲ್ಲ ಅಂಗೋಪಾಂಗಗಳುಂಟಾಗಲು ಕಾರಣ ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ದಂಗೇರುಪಾಂಗೈಃ ಪರಿಪೂರ್ಣದೇಹಿ ॥

ಅರ್ಥ :- ಹೇ ಪ್ರಭೋ ! ದಯವಿಟ್ಟು ಈ ಜೀವನು ಯಾವ ಕಲ್ಯಾಣ ಕಾರ್ಯಗಳನ್ನು ಮಾಡಿರುವುದರ ಫಲವಾಗಿ ಸಕಲ ಅಂಗೋಪಾಂಗಗಳನ್ನು ಪಡೆಯುವನೆಂಬುದನ್ನು ವಿವರಿಸಬೇಕು.

ಉತ್ತರ :- ಅಂಗಾದ್ಯುಪಾಂಗಸ್ಯ ಪರಸ್ಯ ಯೇನ ।
ರಕ್ಷಾಕೃತಾ ಸ್ವಾತ್ಮಸಮಾ ಸದಾ ಚ ॥
ಪರಾಂಗಪುಷ್ಟ್ಯೈಚ ಕೃತಃ ಪ್ರಯತ್ನೋ ।
ಭವೇತ್ಸ ಮೃತ್ವಾ ಪರಿಪೂರ್ಣದೇಹೀ ॥೧೫೫॥

ಅರ್ಥ :- ಸದಾಕಾಲವು ಪರರನ್ನು ತನ್ನಂತೆ ಅನ್ಯಜೀವಿಗಳ ಅಂಗೋ



ಪಾಂಗಗಳನ್ನು ರಕ್ಷಿಸುವನೋ, ಪುಷ್ಟೀಕರಿಸಲು ಪ್ರಯತ್ನಶೀಲನಾಗಿರುವ ಜೀವನು ಪರಲೋಕದಲ್ಲಿ ಜನಿಸಿ ಸರ್ವ ಅಂಗೋಪಾಂಗಗಳಿಂದ್ಯುಕ್ತನಾಗುವನು.

ಭಾವಾರ್ಥ :- ಪರಜೀವಗಳಿಗೆ ದುಃಖವನ್ನು ಉಂಟುಮಾಡುವುದು ಸ್ವಯಂ ದುಃಖಗಳಿಗೆ ಆಹ್ವಾನಕೊಟ್ಟಂತೆಯೇ ಸರಿ, ಹೀಗಿರುವಾಗ ಪರಜೀವಗಳ ಅಂಗಾಂಗಗಳನ್ನು ಕತ್ತರಿಸಿ ವಿಕಲಾಂಗವನ್ನಾಗಿಮಾಡುವುದು, ತನ್ನ ಅಂಗಗಳನ್ನು ಕತ್ತರಿಸಿಕೊಂಡಂತೆಯೇ. ಈ ನೀಚ ಕಾರ್ಯಗಳನ್ನು ಮಾಡದೆ ಇರುವ ಮಾನವನು ಪರಲೋಕದಲ್ಲಿ ಸಕಲ ಅಂಗೋಪಾಂಗಗಳಿಂದ್ಯುಕ್ತನಾಗಿ ಸುಖೀಯಾಗುವನು.

ಮುಂದಕ್ಕೆ ಶ್ರೇಷ್ಠ ಕುಲದಲ್ಲಿ ಉತ್ಪನ್ನನಾಗಲು ಕಾರಣ ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಶ್ರೇಷ್ಠೇ ಕುಲೇ ಜನ್ಮಭವೇಚ್ಚ ನಾನಾಂ ॥

ಅರ್ಥ :- ಹೇ ಸದ್ಗುರುವೇ ! ಯಾವಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲವಾಗಿ ಈ ಜೀವನು ಉತ್ತಮ ಕುಲದಲ್ಲಿ ಜನಿಸುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಪರಪ್ರಶಂಸಾಪಿ ನಿಜಾತ್ಮನಿಂದಾ ।
ದೀನಸ್ಯ ಹೀನಸ್ಯ ಕೃತಾಚಸೇವಾ ॥
ವಿಶ್ವಪ್ರಶಾಂತ್ಯೈ ಪ್ರಿಯಸತ್ಯಭಾಷಾ ।
ಸ್ವಾತ್ತಸ್ಯ ವಾ ಶ್ರೇಷ್ಠಕುಲೇ ಸುಜನ್ಮ ॥೧೫೬॥

ಅರ್ಥ :- ಪರರನ್ನು ಪ್ರಶಂಸಿಸುವುದು, ತನ್ನನ್ನು ದೂಷಿಸಿಕೊಳ್ಳುವುದು, ದೀನದಲಿತರನ್ನು ರಕ್ಷಿಸುವುದು, ಸಂಸಾರದಲ್ಲಿ ಶಾಂತಿ-ಸಮಾಧಾನ ಉಂಟಾಗುವುದಕ್ಕಾಗಿ ಸತ್ಯವು-ಪ್ರಿಯವು ಆದ ವಚನಗಳನ್ನಾಡುವುದು ಇವೇ ಮೊದಲಾದ ಸತ್ಕಾರ್ಯಗಳಲ್ಲಿ ತತ್ಪರನಾಗಿರುವ ಮಾನವನು ಪರಲೋಕದಲ್ಲಿ ಶ್ರೇಷ್ಠ ಕುಲದಲ್ಲಿ ಜನಿಸಿ ಸತ್ಕೀರ್ತಿವಂತನಾಗುವನು.

ಭಾವಾರ್ಥ :- ಸತ್ಕುಲದಲ್ಲಿ ಜನಿಸುವುದು ಮೋಕ್ಷಕ್ಕೆ ಸಾಧನಸ್ವರೂಪವಾಗಿರುತ್ತದೆ. ಮಾತ್ರವಲ್ಲ; ಪ್ರಶಂಸನೀಯವೂ ಆಗಿರುತ್ತದೆ. ಯಾರು ಮೋಕ್ಷಮಾರ್ಗದಲ್ಲಿ ಪ್ರಯತ್ನಶೀಲರಾದವರನ್ನು ಕಂಡು ಪ್ರಶಂಸೆ ಮತ್ತು ತನ್ನ ಶಕ್ತಿಗನುಸಾರವಾಗಿ ದಾನಮಾಡುತ್ತಲೂ, ತನ್ನನ್ನು ನಿಂದಿಸಿಕೊಳ್ಳುತ್ತ ಸ್ವಯಂ ಮೋಕ್ಷಮಾರ್ಗದಲ್ಲಿ ಪ್ರವರ್ತಿಸಲು ಯತ್ನಿಸಿಕೊಂಡಿರುವವನು ದೀನದರಿದ್ರರಿಗೆ ಧನಧಾನ್ಯಾದಿಗಳನ್ನಿತ್ತು ಸಹಾಯಮಾಡುತ್ತ ಶಾಂತಿಸಮಾಧಾನಕ್ಕಾಗಿ ತನ್ಮಯನಾಗಿರುವ ಮಹಾನುಭಾವನು ಪರಲೋಕದಲ್ಲಿ ಉತ್ತಮ ವಂಶದಲ್ಲಿ ಉತ್ಪನ್ನನಾಗುತ್ತಾನೆ.

ಮುಂದಕ್ಕೆ ಸ್ಥಿರಜೀವಿಕೆಯ ಪ್ರಾಪ್ತಿಯಾಗಲು ಕಾರಣ ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಆಜೀವಿಕಾಂ ವಾ ಲಭತೇ ಸ್ಥಿರಾಂಕೌ ॥

ಅರ್ಥ :- ಹೇ ದಯಾಮಯನೇ ! ಯಾವಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲವಾಗಿ ಈ ಜೀವನಿಗೆ ಸ್ಥಿರವಾದ ಜೀವನ ನಿರ್ವಾಹದ ಅನುಕೂಲತೆಗಳು ಪ್ರಾಪ್ತವಾಗುವುವೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಆಜೀವಿಕಾಯಾಂ ವಿನಿಯೋಜ್ಯದೀನಾನ್ ।
ಸ್ಥಾನಸ್ಥಿತೇಭ್ಯಃ ಪಶುಪಕ್ಷಿಕೇಭ್ಯಃ ॥
ದತ್ವಾನ್ನಪಾನಂ ಹೃದಿ ಯಶ್ಚತುಷ್ಟೇ-
ದಾಜೀವಿಕಾಂ ಶಾಂತಿಕಾರಂ ಲಭೇತ್ ॥೧೫೭॥

ಅರ್ಥ :- ದೀನದಲಿತರನ್ನು ಜೀವಿಸಲು ಅನುಕೂಲವಾಗುವ ಕಾರ್ಯಗಳಲ್ಲಿ ಸೇರಿಸಲು ಪ್ರಯತ್ನಪಟ್ಟಿರುವವನು ತಮ್ಮ ಅಧೀನದಲ್ಲಿ ವಾಸಿಸುತ್ತಿರುವ ಪಶುಗಳಿಗೂ, ಹಕ್ಕಿಗಳಿಗೂ, ಅನ್ನಾಹಾರಗಳನ್ನಿತ್ತು ರಕ್ಷಿಸುವ ಮಾನವನು ಪರಜನ್ಮದಲ್ಲಿ ಶಾಂತಿಸಮಾಧಾನದಿಂದ ಯಾವ ವಿಧದ ತೊಂದರೆಗಳಿಲ್ಲದೆ ಜೀವಿತವನ್ನು ನಡೆಸುವವನಾಗುತ್ತಾನೆ.

ಭಾವಾರ್ಥ :- ನಿರಾಕುಲನಾದವನು ಸುಖಿಯು, ಧಾರ್ಮಿಕ ಕಾರ್ಯ



ಗಳನ್ನು ನಡೆಸಿಕೊಂಡು ಹೋಗುವ ಪರಿಣಾಮ ಉಟಾಗುವುದು, ಜೀವನದ ಅನುಕೂಲತೆಗಳಿಲ್ಲದವನ ಮನಸ್ಸು ಸದಾ ಚಿಂತಾಸಾಗರದಲ್ಲಿ ಅಲೆದಾಡುತ್ತಿರುತ್ತದೆ. ಯಾವ ಸನ್ಮನಸ್ಸುಳ್ಳ ಮಾನವನು ಪರಜೀವಗಳಿಗೆ ಸುಖವಾಗಿ ಜೀವಿಸುವ ಮಾರ್ಗವನ್ನು ತೋರಿಸಿಕೊಡುವನೋ, ಹೊಟ್ಟೆಹಸಿವೆಯಿಂದ, ಬಾಯಾರಿಕೆಯಿಂದ ಪೀಡಿತರಾದವರಿಗೂ ಮತ್ತು ಪಶು-ಪಕ್ಷಿಗಳಿಗೂ ಆಹಾರ ಪದಾರ್ಥಗಳನ್ನು ಹಾಗೆ ಜೀವಿಕೆಯ ಪ್ರಶ್ನೆಪರಿಹಾರವನ್ನು ಮಾಡುವನೋ, ಇವೇ ಮೊದಲಾದ ಪರೋಪಕಾರದ ಕೆಲಸಗಳನ್ನು ಮಾಡಿದವನು ಪರಲೋಕದಲ್ಲಿ ಸ್ಥಿರ ಜೀವನ ನಿರ್ವಾಹದ ಸಕಲ ಅನುಕೂಲತೆಗಳನ್ನು ಪಡೆದು ಸದಾ ಸುಖಶಾಂತಿಪೂರ್ವಕ ನಿರಾಕುಲನಾಗಿ ಜೀವಿಸುವವನಾಗಿ ಜನಿಸುವನು.

ಮುಂದಕ್ಕೆ ನೀಚಕುಲದಲ್ಲಿ ಜನಿಸಿದ್ದರೂ ಧನಸಂಪತ್ತಿವಿಭವಗಳು ಪ್ರಾಪ್ತವಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ಕುಲೇಽಪಿ ನೀಚೇ ।
ಜನಾಲಭಂತೇ ಧನರಾಜ್ಯಸತ್ತಾಮ್ ॥

ಅರ್ಥ :- ಹೇ ಭಗವಾನ್ ! ಯಾವಯಾವ ಪರೋಪಕಾರದ ಕಾರ್ಯಗಳನ್ನು ಮಾಡಿರುವುದರಫಲವಾಗಿ ತಾನು ನೀಚಕುಲದಲ್ಲಿ ಜನಿಸಿಯೂ ಕೂಡ ಧನ-ಧಾನ್ಯ-ಸಂಪತ್ತಿ ಯುಕ್ತನಾಗುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಸೇವಾಕೃತಾಽಜ್ಞಾನತಪಃ ಸ್ಥಿತಾನಾಂ ।
ಯೇನ ಪ್ರಶಂಸಾ ವಿನಯಃ ಕೃತಶ್ಚಾ ॥
ತೇಭ್ಯಃ ಪ್ರದತ್ತಂ ವಿಮಲೌಷಧಾನ್ನಂ ।
ಮೃತ್ವಾಸುಖೀ ನೀಚಕುಲೇಪಿ ಸಃ ಸ್ಯಾತ್ ॥೧೫೮॥

ಅರ್ಥ :- ಅಜ್ಞಾನದಿಂದ ತಪಸ್ಸನ್ನು ತಪಿಸುವ ಮಿಥ್ಯಾತಪಸ್ವಿಗಳನ್ನು, ಮಿಥ್ಯಾಗುರುಗಳನ್ನು ಪ್ರಶಂಸಿಸುವುದು, ಅವರಿಗೆ ವಿನಯ ಭಕ್ತಿಪೂರ್ವಕ ಆಹಾರ, ಔಷಧಾದಿಗಳನ್ನು ಕೊಡಿಸುವುದು ಇವೇ ಮೊದಲಾದ ಕಾರ್ಯಗಳನ್ನು ಮಾಡುವ ಮಾನವನು ಪರಜನ್ಮದಲ್ಲಿ ನೀಚಕುಲದಲ್ಲಿ ಜನಿಸಿ, ಅತುಲ ಧನ ಸಂಪತ್ತಿಗಳಿಂದ್ಯುಕ್ತನಾಗಿ ಸುಖವನ್ನು ಭೋಗಿಸುತ್ತಾನೆ.

ಭಾವಾರ್ಥ :- ಆತ್ಮನ ಯಥಾರ್ಥ ಸ್ವರೂಪವನ್ನು ತಿಳಿಯುವುದು ಸಮ್ಯಗ್‌ಜ್ಞಾನವಾಗಿರುತ್ತದೆ. ತನ್ನಾತ್ಮಸ್ವರೂಪವನ್ನರಿಯದ ಸಾಧುಗಳು ತನ್ನ ಶರೀರವನ್ನು ಆತ್ಮನೆಂದು, ಆತ್ಮನು ಸರ್ವವ್ಯಾಪಿಯೆಂದು, ಅಣುಮಾತ್ರವೆಂದು, ಕ್ಷಣಿಕವೆಂದು ಹೀಗೆ ವಿಪರೀತವಾಗಿ ಚಿಂತಿಸುತ್ತ ಮಿಥ್ಯಾತಪಸ್ಸನ್ನಾಚರಿಸುತ್ತಿರುತ್ತಾರೆ. ಮರಗಳಕೊಂಬೆ ತಲೆಕೆಳಗಾಗಿ ತೂಗಿಕೊಂಡು, ಜಡೆಯನ್ನು ಬೆಳಸಿಕೊಂಡು ಕಾಯಕ್ಲೇಶಾದಿಗಳನ್ನು ಮಾಡುತ್ತ ಹಿಂಸಾಕಾರ್ಯದಲ್ಲಿ ತನ್ಮಯರಾಗುತ್ತಾರೆ. ನಾನಾ ಜೀವಹಿಂಸೆಯು ಸಂಭವಿಸುವ ತಪಸ್ಸನ್ನು ಮಾಡುವ ಸಾಧು-ಸನ್ಯಾಸಿಗಳ ಸೇವೆ, ಭಕ್ತಿ, ವಿನಯಾದಿಗಳನ್ನು ಮಾಡುವುದರಿಂದ ಪುಣ್ಯಕರ್ಮಗಳ ಆಸ್ರವವಾಗಲಾರದು. ಕಿಂತು ಅಶುಭಕರ್ಮಗಳ ಬಂಧವೇ ಆಗುತ್ತದೆ. ಆದ್ದರಿಂದ ಅವರು ಮರಣವನ್ನು ಹೊಂದಿ ನೀಚಕುಲದಲ್ಲಿ ಜನಿಸಿದರೂ ಸುಖಿಗಳಾಗುತ್ತಾರೆ. ಧನಧಾನ್ಯಾದಿ ರಾಜರಂತೆ ವಿಭವಾದಿಗಳು ಕೂಡಾ ಪ್ರಾಪ್ತವಾಗುತ್ತವೆ.

ಮುಂದಕ್ಕೆ ಸತ್ಯತೆಯಿಂದ ಜೀವನವನ್ನು ನಡೆಸಲು ಕಾರಣ ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ಜನಸ್ಯವೃತ್ತಿಃ ।
ಸತ್ಯೇನ ಸಾರ್ಧಂ ಚಲತೀಹಲೋಕೇ ॥

ಅರ್ಥ :- ಹೇ ದಯಾಸಾಗರ ! ಈ ಜೀವನು ಯಾವಯಾವ ಒಳ್ಳೆಯ ಕಾರ್ಯಗಳನ್ನು ಮಾಡಿರುವುದರ ಫಲವಾಗಿ ಸತ್ಯಸಂಧತೆಯಿಂದ ಜೀವಿತವನ್ನು ನಡೆಸುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ನಿರ್ವ್ಯಾಜತೋ ಯೇನ ಸಧಾರ್ಮಿಕೇಭ್ಯೋ ।
ದತ್ತಂಚದಾನಂ ಭುವಿತತ್ಪ್ರಶಂಸಾ ॥
ಕೃತಾ ದರಿದ್ರೋಽಪಿ ನ ಹೀನವೃತ್ತಿಃ ।
ಸತ್ಯೈಃ ಸಮಂ ಸ್ಯಾದ್ಭುವಿ ತತ್ಸ್ಯವೃತ್ತಿಃ ॥೧೫೯॥

ಅರ್ಥ :- ಯಾವ ಛಲ-ಕಪಟ ಭಾವನೆಯಿಲ್ಲದೆ ಧರ್ಮಾತ್ಮರಿಗೆ ಆಹಾರ ದಾನಮಾಡುವುದು, ಅವರನ್ನು ಪ್ರಶಂಸಿಸುವುದು, ತಾನು ದರಿದ್ರನಾಗಿದ್ದರೂ



ಹೀನವೃತ್ತಿಯನ್ನು ಗ್ರಹಣೆಮಾಡದಿರುವ ಮಾನವನು ಪರಲೋಕದಲ್ಲಿ ಜನಿಸಿ ಸತ್ಯಸಂಧನೆಂದೆನ್ನಿಸಿಕೊಂಡು ತನ್ನ ಜೀವಿತವನ್ನು ನಡೆಯಿಸುವವನಾಗುತ್ತಾನೆ.

ಭಾವಾರ್ಥ :- ಹೀನ, ದೀನವೃತ್ತಿಯನ್ನು ಧಾರಣೆಮಾಡುವುದು ಪಾಪಕ್ಕೆ ಕಾರಣವಾಗಿರುತ್ತದೆ. ಯಾವ ಜೀವನದ ಕಾರ್ಯಗಳಲ್ಲಿ ಹಿಂಸಾದಿಗಳು ಸಂಭವಿಸುವ ವೃತ್ತಿಗಳಿಗೆ ಹೀನವೃತ್ತಿಗಳೆಂದು ಹೇಳುತ್ತಾರೆ. ದರಿದ್ರನಾದರೂ ದೀನವೃತ್ತಿಯಿಲ್ಲದೆ, ಪಾಪವೃತ್ತಿ ಸಂಭವಿಸದಂತೆಯೂ, ಪುಣ್ಯರೂಪವಾಗುವಂತೆಯೂ ಯತ್ನಶೀಲನಾಗುತ್ತಾನೆಯೋ ಮತ್ತು ಧರ್ಮಾತ್ಮರಲ್ಲಿ ಛಲ-ಕಪಟ ಭಾವನೆಯಿಲ್ಲದೆ ಆಹಾರಾದಿಗಳನ್ನಿತ್ತು ವೈಯ್ಯಾವೃತ್ಯಮಾಡುವುದು, ಪ್ರಶಂಸಿಸುವುದು ಇವೇ ಮೊದಲಾದ ಉತ್ತಮಕಾರ್ಯಗಳನ್ನು ಮಾಡುವವನು ಪರಲೋಕದಲ್ಲಿ ಉತ್ತಮ ಮಾನವನಾಗಿ ಜನಿಸಿ ನಿರಾಕುಲನಾಗಿ ಜೀವಿತವನ್ನು ಸಾಗಿಸುತ್ತ ಸತ್ಯಸಂಧನಾಗಿ ಬಾಳುವನು.

ಮುಂದಕ್ಕೆ ಅನೇಕ ಜೀವಗಳು ಏಕಕಾಲದಲ್ಲಿ ಸುಖಿಗಳಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದೈಕಕಾಲೇ ।
ಹ್ಯನೇಕ ಜಂತೋಶ್ಚ ಸುಖೋದಯಃ ಸ್ಯಾತ್ ॥

ಅರ್ಥ :- ಹೇ ಭಗವಾನ್ ! ಕೃಪೆದೋರಿ ಈ ಜೀವಗಳು ಯಾವ ಪುಣ್ಯ ಕಾರ್ಯಗಳನ್ನು ಮಾಡಿರುವುದರ ಫಲವಾಗಿ ಏಕಕಾಲದಲ್ಲಿ ಸುಖಿಗಳಾಗುವರೆಂಬುದನ್ನು ವಿವರಿಸಬೇಕು.

ಉತ್ತರ :- ಯೇ ಪಂಚಕಲ್ಯಾಣ ವಿಧಿಂ ವಿಲೋಕ್ಯ ।
ಕೃತ್ವಾ ಚಭಕ್ತ್ಯಾ ಜಿನತೀರ್ಥಯಾತ್ರಾಂ ॥
ದತ್ವಾನ್ನದಾನಂ ಮುನಯೇಽತಿ ಹೃಷ್ಟಾ ।
ಸ್ತೇಷ್ವೇಕ ಕಾಲೇಚ ಸುಖೋದಯಃ ಸ್ಯಾತ್ ॥೧೬೦॥

ಅರ್ಥ :- ಪಂಚಕಲ್ಯಾಣ ಪೂಜಾಮಹೋತ್ಸವ ವಿಧಿಯನ್ನು ಕಂಡು, ತೀರ್ಥಕ್ಷೇತ್ರಗಳ ದರ್ಶನಮಾಡಿ ಮತ್ತು ಮಹಾಮುನಿಗಳಿಗೆ ಭಕ್ತಿಯಿಂದ

ಆಹಾರವನ್ನಿತ್ತು ಆನಂದಪಡುವ ಜೀವಗಳಿಗೆ ಏಕ ಕಾಲದಲ್ಲಿ ಪುಣ್ಯಕರ್ಮಗಳನ್ನು ಸಂಪಾದಿಸಿರುವದರ ಪ್ರಭಾವದಿಂದ ಅವರೆಲ್ಲರು ಏಕ ಕಾಲದಲ್ಲಿ ಸುಖಿಗಳಾಗುತ್ತಾರೆ.

ಭಾವಾರ್ಥ :- ಪಂಚಕಲ್ಯಾಣ ಮಹೋತ್ಸವವನ್ನು ನೋಡುವುದಕ್ಕಾಗಿ ಅನೇಕರು ಒಟ್ಟು ಸೇರುವುದುಂಟು ಆಗ ಗರ್ಭಾವತರಣವಿಧಿಯನ್ನು, ಜಿನ ಬಾಲಕನ ಜನನವಾದೊಡನೆ ಸ್ವರ್ಗದಿಂದ ಶಚಿದೇವಿಸಹಿತನಾಗಿ ದೇವೇಂದ್ರನು ಬಂದು ಜಿನಬಾಲಕನನ್ನು ವೈಭವದಿಂದ ಐರಾವತ ಆನೆಯ ಮೇಲೆ ಕುಳ್ಳಿರಿಸಿಕೊಂಡು ಮೇರುಪರ್ವತಕ್ಕೆ ಹೋಗುತ್ತಾನೆ. ಅಲ್ಲಿರುವ ಪಾಂಡುಕ-ಶಿಲೆಯ ಮೇಲಿರುವ ಸಿಂಹಾಸನದಲ್ಲಿ ಕುಳ್ಳಿರಿಸಿ ಕ್ಷೀರ ಸಮುದ್ರ ಜಲದಿಂದ ಅಭಿಷೇಕ ಮಾಡುತ್ತಾನೆ. ಆ ಸಮಯದಲ್ಲಿ ಸಹಸ್ರಾರು ಧರ್ಮ ಭಕ್ತರು ಉತ್ಸವವನ್ನು ಕಂಡು ಆನಂದ ಸಾಗರದಲ್ಲಿ ಮುಳುಗೇಳುತ್ತಿರುತ್ತಾರೆ. ಅವರು ಏಕಕಾಲದಲ್ಲಿ ಭಗವಾನ್ ಕೀ ಜೈ ಜೈಯೆಂದು ಜಯಕಾರ ಮಾಡುತ್ತಿರುತ್ತಾರೆ. ಇದೇ ಪ್ರಕಾರವಾಗಿ ದೀಕ್ಷಾಕಲ್ಯಾಣ, ಕೇವಲ ಜ್ಞಾನಕಲ್ಯಾಣ, ಮತ್ತು ಮೋಕ್ಷ ಕಲ್ಯಾಣಾದಿ ಮಹಾವಿಧಿಗಳನ್ನು ನೋಡುವ ಸನ್ನಿವೇಶದಲ್ಲಿ ಆನಂದಧರ್ಮ ಲಹರಿಯ ಕಾಲದಲ್ಲಿ ಮಹಾನ್ ಪುಣ್ಯ ಕರ್ಮಬಂಧವಾಗುತ್ತದೆ. ಆ ಪುಣ್ಯ ಬಂಧವು ಉದಯಕ್ಕೆ ಬರುವಾಗ ಸರ್ವ ಜೀವಗಳಿಗೆ ಏಕಕಾಲದಲ್ಲಿ ಸುಖಾನುಭವವಾಗುತ್ತದೆ.

ಆದರೂ ಆ ಜೀವಗಳ ಪರಿಣಾಮಗಳಿದ್ದುದರಿಂದ ಸ್ಥಿತಿ, ಅನುಭಾಗಗಳಲ್ಲಿಯು ಅಂತರ ಬೀಳುವುದು. ಅಂತಹ ಸಮಯದಲ್ಲಿ ಅನೇಕ-ಜೀವಗಳ ಪರಿಣಾಮ ಪ್ರಾಯಃ ಸಮಾನ ಭಕ್ತಿರೂಪವಾಗಿರುತ್ತದೆ. ಆ ಜೀವಗಳ ಕರ್ಮವು ಏಕ ಕಾಲದಲ್ಲಿ ಉದಯಕ್ಕೆ ಬಂದು ಏಕಕಾಲದಲ್ಲಿ ಸುಖವನ್ನು ಕೊಡುತ್ತದೆ. ಮತ್ತು ಸುಖಿಗಳಾಗುತ್ತಾರೆ.

ಮುಂದಕ್ಕೆ ಅನೇಕ ಜೀವಗಳು ಏಕ ಕಾಲದಲ್ಲಿ ಮೋಕ್ಷವನ್ನು ಪಡೆಯಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಯೋಗಾಚ್ಚ ವದೈಕ ಕಾಲೇ ।
ಪ್ರಯಾಂತಿ ಮೋಕ್ಷಂ ಬಹುಜೀವ ವರ್ಗಾಃ ॥



ಅರ್ಥ :- ಹೇ ಭಗವಾನ್ ! ಯಾವ ಯಾವ ಜೀವಗಳು ಯಾವ ಯಾವ ಕಾರ್ಯಗಳನ್ನು ಮಾಡಿರುವುದರ ಫಲವಾಗಿ ಏಕ ಕಾಲದಲ್ಲಿ ಅವು ಮೋಕ್ಷವನ್ನು ಪಡೆಯುವುವೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ದೀಕ್ಷಾ ಪ್ರಶಂಸಾ ಬಹುಜೀವ ಕೈರ್ಯ್ಯೆ ।
ಭರ್ಕ್ತ್ಯಾ ಕೃತಾ ತೀರ್ಥಕರಸ್ಯ ಲೋಕೇ ॥
ಸ್ವಾನಂದ ತುಷ್ಟಸ್ಯಯತೇಃ ಸ್ತುತಿರ್ವಾ ।
ತೇ ಏಕ-ಕಾಲೇಚ ಶಿವಂ ಪ್ರಯಾಂತಿ ॥೧೬೦॥

ಅರ್ಥ :- ತೀರ್ಥಂಕರ ಪರಮ ದೇವರು ದೀಕ್ಷೆಯನ್ನು ಧಾರಣೆಮಾಡುವಾಗ ಆ ದೀಕ್ಷಾ ವಿಧಿಯನ್ನು ಕಂಡ ಅನೇಕ ಜೀವಗಳು ಭಕ್ತಿಪೂರ್ವಕ ಸ್ತುತಿಸಿದರು. ಇನ್ನು ಕೆಲವು ಜೀವಗಳು ತಮ್ಮ ಶುದ್ಧಾತ್ಮನಲ್ಲಿ ತನ್ಮಯರಾಗಿದ್ದ ಮುನಿಗಳನ್ನು ಮನಃಪೂರ್ವಕ ಪ್ರಶಂಸಿಸಿದರು, ಸ್ತುತಿಸಿದರು. ಈ ಜೀವಗಳೆಲ್ಲವು ಏಕ ಕಾಲದಲ್ಲಿ ನಿರ್ವಾಣಪದವಿಯನ್ನು ಪಡೆಯುವವು.

ಭಾವಾರ್ಥ :- ತೀರ್ಥಂಕರ ಪರಮ ಜಿನ ದೇವರ ದೀಕ್ಷಾಕಾಲದಲ್ಲಿ ಸಹಸ್ರಾರು ಲೌಕಾಂತಿಕ ದೇವತೆಗಳು ಲಕ್ಷಾಂತರ ವಿದ್ಯಾಧರರು, ಭೂಮಿಗೋಚಾರಿಗಳು ಬಂದು ಭಕ್ತಿಭಾವದಿಂದ ಸ್ತುತಿಸುತ್ತಾರೆ. ಅವರಲ್ಲಿ ಲೌಕಾಂತಿಕ ದೇವತೆಗಳು ಏಕಭವಾವತಾರಿಗಳು ಚರಮಶರೀರಗಳು ದೇವಪರ್ಯಾಯವನ್ನು ಬಿಟ್ಟು ಶ್ರೇಷ್ಠ ಮಾನವರಾಗಿ ಜನ್ಮತಾಳಿ ತಪಶ್ಚರಣಗೈದು ಮೋಕ್ಷವನ್ನು ಪಡೆಯುವ ಮಹಾನ್ ಆತ್ಮರುಗಳಾಗಿರುತ್ತಾರೆ. ವಿದ್ಯಾಧರರು, ಭೂಮಿಗೋಚರಿಗಳಲ್ಲಿ ಅನೇಕರು ಭವ್ಯರಲ್ಲಿ ಕೆಲವರು ನಿಕಟ ಭವ್ಯರಾಗಿರುತ್ತಾರೆ. ಅವರೆಲ್ಲರು ಒಂದೆರಡು ಭವಗಳಲ್ಲಿಯೆ ಶಾಶ್ವತ ಸುಖವನ್ನು ಪಡೆಯುತ್ತಾರೆ.

ಮುಂದಕ್ಕೆ ಕೆಲವು ಪಶು-ಪಕ್ಷಿಗಳನ್ನು ಕಂಡ ಮಾನವರಿಗೆ ಪರಸ್ಪರ ಸ್ನೇಹ ಉಂಟಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಶುಂ ನರಂ ವಾ ಕಮಪೀಹ ದೃಷ್ಟ್ವಾ ।
ಕಸ್ಮಾತ್ ಶುಭಾತ್ ಸ್ಯಾಚ್ಚಮಿಥಃ ಪ್ರಮೋದಃ ॥

ಅರ್ಥ :- ಹೇ ಕರುಣಾನಿಧೇ ! ಯಾವ ಯಾವ ಶುಭಕಾರ್ಯಗಳನ್ನು ಮಾಡಿರುವುದರ ಫಲವಾಗಿ ಪಶು-ಪಕ್ಷಿಗಳನ್ನು ಕಂಡು ಮಾನವರಿಗೆ ಪ್ರೇಮ ಉಂಟಾಗಲು ಮತ್ತು ಅವುಗಳಿಗೆ ಇವರಲ್ಲಿ ಸ್ನೇಹಭಾವನೆಯುಂಟಾಗಲು ಕಾರಣವನ್ನು ಹೇಳಬೇಕು.

ಉತ್ತರ :- ಪಿತಾ ಚ ಮಾತಾ ಯದಿ ವಾ ಸುಪುತ್ರೋ ।
ಭಕ್ತ್ಯೋಪಕಾರಂ ಹ್ಯಕರೋನ್ಮಿಥೋಽನ್ಯಃ ॥
ಸಖಾ ಭವೇತ್ಪೂರ್ವ ಭವಸ್ಯ ಬಂಧು-
ಸ್ತಾನ್ ವಿಕ್ಷ್ಯ ಮೋಹೋ ಭವತೀಹ ಜಂತೋಃ ॥೧೬೨॥

ಅರ್ಥ :- ತಂದೆ, ತಾಯಿ, ಪುತ್ರ ಮತ್ತು ಬಂಧುಬಾಂಧವರು ಸೇರಿಕೊಂಡು ಭಕ್ತಿಪೂರ್ವಕ ಪರಸ್ಪರ ಉಪಕಾರ, ಸ್ನೇಹವನ್ನು ಮಾಡಿಕೊಂಡಿರುತ್ತಾರೆ. ಆ ಜೀವಗಳಲ್ಲಿ ಕೆಲವು ಜೀವಗಳು ಪರಲೋಕದಲ್ಲಿ ಜನಿಸಿದಾಗ ಅವುಗಳನ್ನು ಕಂಡೊಡನೆ ಅಥವಾ ಪೂರ್ವಜನ್ಮದಲ್ಲಿ ಯಾವುದಾದರೊಬ್ಬ ಸಹೋದರನ, ಮಿತ್ರನ ಜೀವನಾಗಿದ್ದವನನ್ನು ಕಂಡೊಡನೆ ಸ್ನೇಹ, ಪ್ರೇಮ ಭಾವನೆ ಉಂಟಾಗುತ್ತದೆ.

ಭಾವಾರ್ಥ :- ಯಾವುದಾದರೊಂದು ಪಶುವನ್ನಾಗಲಿ, ಮನುಷ್ಯನನ್ನಾಗಲಿ ನೋಡಿದೊಡನೆ ಪ್ರೇಮಭಾವನೆಯುಂಟಾದೊಡನೆ ವಿಚಾರಿಸಬೇಕು. ಈ ಜೀವದೊಡನೆ ಪೂರ್ವಭವದ ಯಾವುದಾದರೊಂದು ಸಂಬಂಧ, ಬಾಂಧವತ್ವ ಇರಬೇಕೆಂದು ತಿಳಿಯಬೇಕು. ಪೂರ್ವಭವದ ಯಾವುದಾದರೊಂದು ಸಂಬಂಧವಿಲ್ಲದೆ ಪ್ರೇಮವಾಗಲಿ, ದ್ವೇಷವಾಗಲಿ ಉಂಟಾಗಲಾರದು. ಪೂರ್ವಜನ್ಮದಲ್ಲಿ ಯಾವಯಾವ ಜೀವಗಳು ತನಗೆ ಉಪಕಾರ, ಸ್ನೇಹಮಾಡಿರುತ್ತವೆಯೋ ಅಥವಾ ತನ್ನಿಂದ ಉಪಕೃತಗಳಾಗಿರುತ್ತವೆಯೋ, ಅವರನ್ನು ಕಂಡೊಡನೆ ಸ್ನೇಹಭಾವನೆಯುಂಟಾಗುತ್ತದೆ. ಅಷ್ಟೇ ಅಲ್ಲ ಸ್ನೇಹವನ್ನು ತೋರಿಸುತ್ತವೆ. ಪೂರ್ವಜನ್ಮದ ಮಿತ್ರನಾಗಲಿ, ಬಂಧುಬಾಂಧವರಾಗಲಿ ಬೇರೆ ಬೇರೆ ಸ್ಥಾನಗಳಲ್ಲಿ ಜನ್ಮತಾಳಿದರೂ ಅವು ಒಬ್ಬರನ್ನೊಬ್ಬರು ಕಾಣುವಾಗ ಪ್ರೇಮ, ಸ್ನೇಹ ಉಂಟಾಗುತ್ತದೆ. ಈ ವಿಷಯವನ್ನು ತಿಳಿದು ಯಾರಲ್ಲಿಯೂ



ದ್ವೇಷಭಾವನೆಯನ್ನು ಕಟ್ಟಿಕೊಳ್ಳಬಾರದು. ಸಕಲ ಜೀವಗಳಲ್ಲಿ ಸ್ನೇಹಭಾವನೆಯನ್ನಿಟ್ಟುಕೊಂಡು ಉಪಕಾರವನ್ನು ಮಾಡಿಕೊಂಡಿರುವುದು ಆತ್ಮಶಾಂತಿಯ ಸರಳ ಉಪಾಯವಾಗಿರುತ್ತದೆ.

ಮುಂದಕ್ಕೆ ಆಪತ್ತಿಯಲ್ಲಿ ಸಹಾಯ ಉಂಟಾಗಲು ಕಾರಣ ಹೇಳುತ್ತಾರೆ.

ಪ್ರಶ್ನೆ :- ಕಿಂ ಕಾರಣಂ ಮೇಽಸ್ತಿ ವಿನಾಹಿಕೋಽಪಿ ।
ದುಃಖೇ ಸಹಾಯೋ ಭವತೀಹ ಜೀವಃ ॥

ಅರ್ಥ :- ಹೇ ದೇವಾಧಿದೇವನೇ ! ಯಾವ ವಿಧವಾದ ಕಾರಣಗಳಿಲ್ಲದೆ ತನಗೆ ಆಪತ್ತಿ, ಸಂಕಷ್ಟಗಳು ಸಂಭವಿಸಿರುವಾಗ ಯಾರಾದರು ಸಹಾಯಕರಾಗಲು ಕಾರಣವೇನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಯಸ್ಮೈ ಪ್ರದತ್ತಂ ವಸನೌಷಧಾನ್ನಂ ।
ಯಸ್ಯೈವ ರಕ್ಷಾ ವಿಪದಿ ತ್ವಯಾಚೇತ್ ॥
ಕೃತಾ ವಿಶೇಷಾ ಹೃದಿ ಯತ್ಪ್ರಶಂಸಾ ।
ಸ ಸ್ಯಾತ್ಸಹಾಯೋ ವಿಷಮೇಪಿ ದುಃಖೇ ॥೧೬೩॥

ಅರ್ಥ :- ಪೂರ್ವಜನ್ಮದಲ್ಲಿ ಯಾರಿಗಾದರು ವಸ್ತ್ರ, ಔಷಧ, ಆಹಾರ ಪಾನಾದಿಗಳನ್ನು ಕೊಟ್ಟು ಆಪತ್ತಿಗಳಿಂದ ರಕ್ಷಿಸಿರುವರೋ, ಸದ್ಗುಣಗಳನ್ನು ಮನಃಪೂರ್ವಕವಾಗಿ ಪ್ರಶಂಸಿಸಿರುವರೋ ಅಂತಹ ಜೀವಗಳು ಸತ್ತು ಪರಜನ್ಮದಲ್ಲಿ ಘೋರ ಆಪತ್ತಿ ಸಂಕಷ್ಟ ಮತ್ತು ರೋಗಾದಿ ದುಃಖಗಳಲ್ಲಿ ಸಿಲುಕಿದಾಗ ಉಪಕೃತರಾಗಿದ್ದ ಜೀವಗಳು ಸಹಾಯಕರಾಗುವರು.

ಭಾವಾರ್ಥ :- ಪರರಿಗೆ ಉಪಕಾರಮಾಡುವುದು, ಆಪತ್ತಿಯಲ್ಲಿ ಸಿಲುಕಿದವರನ್ನು ರಕ್ಷಿಸುವುದು, ರೋಗದಿಂದ ಬಳಲುತ್ತಿರುವವರಿಗೆ ಔಷಧಿಯನ್ನು ಕೊಡಿಸಿ ರೋಗದಿಂದ ನಿರ್ಮುಕ್ತರನ್ನಾಗಿ ಮಾಡುವುದು, ಅಂತವರ ಸೇವೆ, ಸುಶ್ರೂಷೆಮಾಡುವುದು, ದೀನದುಃಖಿಗಳಿಗೆ ಸಹಾಯಮಾಡುವುದು. ದಾರಿತಪ್ಪಿ ಗೋಳಾಡುತ್ತಿರುವವರಿಗೆ ದಾರಿತೋರಿಸಿ ಅವರ ಸ್ಥಾನಕ್ಕೆ ತಲುಪಿಸುವುದು ಇವೇ ಮೊದಲಾದ ಪರೋಪಕಾರಕ ಕಾರ್ಯಗಳನ್ನು ಮಾಡುವ ಜೀವಗಳು

ಇಹಜನ್ಮದಲ್ಲಿಯೂ, ಪರಜನ್ಮದಲ್ಲಿಯೂ, ಆಕಸ್ಮಿಕ ಸಂಕಷ್ಟಗಳಲ್ಲಿ ಸಿಲುಕಿ ಬಳಲುವಾಗ ಆಕಸ್ಮಿಕವಾಗಿ ಸಹಾಯಕರಾಗಿ ದುಃಖಗಳಿಂದ ಪಾರುಗೊಳಿಸುತ್ತವೆ. ಇದೆಲ್ಲವನ್ನು ತಿಳಿದು ಸದಾಕಾಲವೂ ಪರಜೀವಗಳ ದುಃಖ, ಕಷ್ಟಗಳನ್ನು ಹೋಗಲಾಡಿಸುವ ಬುದ್ಧಿಯುಳ್ಳವರಾಗಬೇಕು. ಇದರಿಂದ ಮಾನವ ಜನ್ಮದ ಸಾರ್ಥಕತೆಯಾಗುವುದು.

ಮುಂದಕ್ಕೆ ಜೀವಗಳ ಧನಸಂಪತ್ತಿಗಳು ಧಾರ್ಮಿಕ ಕಾರ್ಯದಲ್ಲಿ ವ್ಯಯವಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ವ್ಯಯೋ ಧನಾದೇರ್ಭವತೀಹ ಧರ್ಮೇ ॥

ಅರ್ಥ :- ಹೇ ಭಗವಾನ್ ! ಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರ ಮಹತ್ತರ ಫಲವಾಗಿ ಈ ಜೀವನ ದ್ರವ್ಯವಾಗಲಿ, ಅನ್ಯಪದಾರ್ಥಗಳಾಗಲಿ ಧಾರ್ಮಿಕ ಕಾರ್ಯಗಳಲ್ಲಿ ಉಪಯೋಗಿಸುವ ಕಾರಣವನ್ನು ಹೇಳಬೇಕು.

ಉತ್ತರ :- ಧನವ್ಯಯಂ ಕುರ್ವತ ಏವಧರ್ಮೇ ।
ಲೀನಾದ್ ಸುವಿದ್ಯಾಧ್ಯಯನೇಪಿ ಜೀವಾನ್ ॥
ಪ್ರಭಾವನಾಯಾಂ ಪ್ರವಿಲೋಕ್ಯತುಷ್ಯೇದ್ ।
ಧರ್ಮೇ ಸದಾ ತಸ್ಯ ಧನವ್ಯಯಃ ಸ್ಯಾತ್ ॥೧೬೪॥

ಅರ್ಥ :- ಧಾರ್ಮಿಕ ಕಾರ್ಯಗಳಿಗಾಗಿಯೂ, ಧರ್ಮಪ್ರಭಾವನೆಯ ಕೆಲಸದಲ್ಲಿಯೂ ತನ್ನ ದ್ರವ್ಯವನ್ನು ಉಪಯೋಗಿಸುವುದು, ಮೋಕ್ಷಮಾರ್ಗವನ್ನು ಪ್ರತಿಪಾದಿಸುವ ಧರ್ಮಶಾಸ್ತ್ರಗ್ರಂಥಗಳ ಪಠನ-ಪಾಠಣ ಸತ್ಕಾರ್ಯಗಳಲ್ಲಿ ಲೀನರಾಗಿರುವ ಜೀವಗಳನ್ನು ಕಂಡು ಸಂತುಷ್ಟರಾಗುವವರ ಧನಸಂಪತ್ತಿಗಳು ಧಾರ್ಮಿಕ ಕಾರ್ಯಗಳಲ್ಲಿಯೇ ವ್ಯಯವಾಗುವುವು.

ಭಾವಾರ್ಥ :- ಪೂರ್ವಜನ್ಮದಿಂದಲೇ ಧಾರ್ಮಿಕ ಸಂಸ್ಕಾರವು, ಧರ್ಮಪ್ರೇಮವು, ಧಾರ್ಮಿಕ ಕಾರ್ಯಗಳಲ್ಲಿ ತನ್ನ ಧನಸಂಪತ್ತಿಯನ್ನು ಉಪಯೋಗಿಸುತ್ತ ಉಂಟಾಗುವ ಸಂತೋಷಪರಿಣಾಮವು ಮತ್ತು ಯಾರಾದರು ಧರ್ಮ



ಪ್ರಭಾವನೆಯ ಕಾರ್ಯದಲ್ಲಿ ಧನವನ್ನು ಉಪಯೋಗಿಸುವವರನ್ನು, ಶಾಸ್ತ್ರ, ಸ್ವಾಧ್ಯಾಯದಲ್ಲಿ ತತ್ಪರರಾದವರನ್ನು ಮತ್ತು ಶ್ರದ್ಧೆಯಿಂದ ಓದುವ ವಿದ್ಯಾರ್ಥಿಗಳನ್ನು ಕಂಡು ಪ್ರಸನ್ನನಾಗುವ ಮಾನವನು. ಇಹಲೋಕದಲ್ಲಿ ಜನಿಸಿ ಧರ್ಮಪ್ರೇಮವುಳ್ಳವನಾಗುವನು. ಹಾಗೆ ಅವನು ಧನಸಂಪತ್ತಿ ಮೊದಲಾದ ಪದಾರ್ಥಗಳು ಧಾರ್ಮಿಕ ಕಾರ್ಯಗಳಿಗಾಗಿಯೇ ಮೀಸಲಾಗುವವು. ಆದ್ದರಿಂದ ಪ್ರತಿಯೊಬ್ಬರೂ ಧರ್ಮ, ಧರ್ಮಕಾರ್ಯಗಳಲ್ಲಿ ಪ್ರೀತಿಯಿಡಬೇಕು. ಇದು ಕ್ರಮೇಣ ಜೀವಗಳ ಆತ್ಮಕಲ್ಯಾಣಕ್ಕೆ ಸಹಾಯವಾಗುವುದೆಂಬುದನ್ನು ಮರೆಯಬಾರದು.

ಮುಂದಕ್ಕೆ ಶ್ರುತಜ್ಞಾನದಲ್ಲಿ ಪಾರಂಗತನಾಗಲು ಕಾರಣ ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಜೀವೋ ಭವೇತ್ಕೋ ಶ್ರುತಬೋಧಧಾರೀ ॥

ಅರ್ಥ :- ಹೇ ದಯಾನಿಧೇ! ಈ ಜೀವನು ಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲವಾಗಿ ಶ್ರುತಜ್ಞಾನಧಾರಿಯಾಗುವನೆಂಬುದನ್ನು ವಿವರಿಸಬೇಕು.

ಉತ್ತರ :- ಆಜ್ಞಾಪಿ ಭಕ್ತ್ಯಾಪರಿಪಾಲಿತಾ ಹಿ ।
ಗುರೋಶ್ಚಸೇವಾ ವಿನಯೋಪಚಾರಃ ॥
ಯೇನ ಪ್ರಶಂಸಾಪಿ ಕೃತಾತ್ಮಶುದ್ಧೇಃ ।
ಭವೇತ್ಸ ಭವ್ಯಃ ಶ್ರುತಬೋಧಧಾರೀ ॥ ॥ ೧೬೫ ॥

ಅರ್ಥ :- ಗುರುವಿನ ಆಜ್ಞೆಯನ್ನು ಭಕ್ತಿ, ವಿನಯಪೂರ್ವಕ ಪಾಲಿಸುವುದು, ಸ್ತುತಿಸುವುದು, ಸೇವೆಗೈಯುವುದು ಮತ್ತು ಆತ್ಮನ ಶುದ್ಧಸ್ವರೂಪವನ್ನು ಪ್ರಶಂಸಿಸುವುದು ಇವೇ ಮೊದಲಾದ ಶುಭ ಕಾರ್ಯತತ್ಪರನಾದ ಜೀವನು ಶ್ರುತಜ್ಞಾನಧಾರಕನಾಗಿಯೇ ಜನಿಸುವನು.

ಭಾವಾರ್ಥ :- ಶ್ರುತಜ್ಞಾನವು ಶ್ರುತಜ್ಞಾನಾವರಣೀಯ ಕರ್ಮದ ಕ್ಷಯೋಪಶಮದಿಂದುಂಟಾಗುತ್ತದೆ. ಆ ಶ್ರುತಜ್ಞಾನಾವರಣೀಯ ಕರ್ಮದ

ಕ್ಷಯೋಪಶಮವಾಗಬೇಕಾದರೆ ಗುರುಭಕ್ತಿ, ಗುರುಸೇವೆ, ಗುರು ಆಜ್ಞಾ ಪಾಲನೆ, ಗುರುಗುಣಪ್ರಶಂಸೆ, ಜಿನವಾಣಿಯ ಪ್ರಚಾರ, ಜಿನವಾಣಿಯ ಪಠಣ ಪಾಠಣಾದಿಗಳಿಂದಲೇ ಆಗುವುದು. ಶ್ರುತಜ್ಞಾನವೃದ್ಧಿಯ ಕಾರ್ಯತತ್ಪರನಾದ ಭವ್ಯಾತ್ಮನು ಮರುಭವದಲ್ಲಿ ಶ್ರುತಜ್ಞಾನಧಾರಕ ಮಹಾಮಹಿಮನಾಗಿಯೇ ಜನಿಸುವನು. ಆದ್ದರಿಂದ ಭವ್ಯಾತ್ಮರು ಸದಾಕಾಲ ಜಿನವಾಣಿಯ ಸೇವೆ, ಪ್ರಚಾರ ಮತ್ತು ಅಭ್ಯಾಸವನ್ನು ಮಾಡುತ್ತಿರಬೇಕು. ಅದು ಆತ್ಮಶಾಂತಿಯ ಪ್ರಧಾನ ಕಾರಣವಾಗಿರುತ್ತದೆ.

ಮುಂದಕ್ಕೆ ಶೀಲವಂತನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸಚ್ಛೀಲಧಾರೀ ಭವತೀಹ ಜೀವಃ ॥

ಅರ್ಥ :- ಹೇ ಸದ್ಗುರುವೇ ! ಯಾವ ಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲದಿಂದ ಜೀವನು ಪರಲೋಕದಲ್ಲಿ ಮಹಾಶೀಲವಂತನಾಗಿ ಜನಿಸುವನೆಂಬುದನ್ನು ವಿವರಿಸಬೇಕು.

ಉತ್ತರ :- ಸುಶೀಲವತ್ಯಾಃ ಸುಜನಸ್ಯ ಸೇವಾ ।
ಸ್ವಾನಂದಭಾಜಃ ಸುಗುರೋಃ ಸುಸಂಗಃ ॥
ಶ್ರೀದಾ ಕೃತಾ ಯೇನ ನಿಜಾತ್ಮಚರ್ಚಾ ।
ಸ ಸ್ಯಾನ್ಮನುಷ್ಯಶ್ಚ ಸುಶೀಲಧಾರೀ ॥೧೬೬॥

ಅರ್ಥ :- ಪೂರ್ವಜನ್ಮದಲ್ಲಿ ಶೀಲವಂತರಾದ ಸ್ತ್ರೀಯರ, ಪುರುಷರ ಸೇವೆಯನ್ನು ಮಾಡುವವನು, ಆತ್ಮಸ್ವರೂಪದಲ್ಲಿ ಲೀನವಾಗಿರುವ ವೀತರಾಗ ನಿರ್ಗ್ರಂಥ ಗುರುಗಳ ಸನ್ನಿಧಿಯಲ್ಲಿದ್ದು ಸೇವೆಮಾಡುವ ಮಾನವನು ಮತ್ತು ಅಂತರಂಗ-ಬಹಿರಂಗ ಲಕ್ಷ್ಮಿಯನ್ನುಂಟುಮಾಡುವ ತನ್ನ ಆತ್ಮನ ಶುದ್ಧ ಸ್ವರೂಪದ ವಿಷಯವಾಗಿ ಚರ್ಚೆಮಾಡಿಕೊಂಡಿರುವ ಮಾನವನು ಇಹಲೋಕ ದಲ್ಲಿ ಜನ್ಮತಾಳಿ ಮಹಾಶೀಲವಂತ ಮಹಾಪುರುಷನಾಗುವನು.

ಭಾವಾರ್ಥ :- ಶೀಲವ್ರತವನ್ನು ಪಾಲಿಸಬೇಕೆಂಬ ಇಚ್ಛೆಯುಳ್ಳವನು



ಅದು ಉತ್ತಮವೆಂದು ತಿಳಿಯುವುದು ಮತ್ತು ಆತ್ಮನ ಯಥಾರ್ಥ ಸ್ವರೂಪ ವನ್ನರಿತವನಾದ ಮಾನವನು ಶೀಲವಂತರ ಸೇವೆಮಾಡುವುದು, ಶೀಲವತಿಯ ರಾದ ಸ್ತ್ರೀಯರನ್ನು ಗೌರವಿಸುವುದು, ಹೊಗಳುವುದು, ಶೀಲವ್ರತ, ಪರಮ ಬ್ರಹ್ಮಚರ್ಯವನ್ನು ಧಾರಣೆಮಾಡಿ ತಮ್ಮ ಶುದ್ಧಾತ್ಮನಲ್ಲಿ ತನ್ಮಯರಾದ ನಿರ್ಗ್ರಂಥ ಗುರುಪುಂಗವರ ಸನ್ನಿಧಿಯಲ್ಲಿದ್ದು ಸೇವೆಗೈಯುವ ಮತ್ತು ಬ್ರಹ್ಮಚರ್ಯ ಶುದ್ಧಾತ್ಮ ಸ್ವರೂಪವನ್ನು ತಿಳಿಯುವುದಕ್ಕೋಸ್ಕರ ಚರ್ಚೆ, ಮನನ, ಧ್ಯಾನಮಾಡುವವನು ಪರಲೋಕದಲ್ಲಿ ಪರಮಶೀಲವಂತನಾಗಿಯೇ ಜನಿಸುವನು.

ಮುಂದಕ್ಕೆ ಸರ್ವರ ಪ್ರಿಯ ಪಾತ್ರನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಭವೇನ್ಮನುಷ್ಯಃ ಸಕಲಪ್ರಿಯಃ ಕೌ ॥

ಅರ್ಥ :- ಹೇ ಭಗವಾನ್ ! ಕೃಪೆಮಾಡಿ ಈ ಜೀವನು ಯಾವ ಯಾವ ಉತ್ತಮ ಕಾರ್ಯಗಳನ್ನು ಮಾಡಿರುವುದರ ಮಹತ್ತರ ಫಲವಾಗಿ ಸಂಸಾರದಲ್ಲಿ ಸರ್ವರಿಗೆ ಪ್ರಿಯನಾಗಿ ಜನಿಸುವುದೆಂಬುದನ್ನು ವಿವರಿಸಬೇಕು.

ಉತ್ತರ :- ಸ್ನೇಹೋ ಮಿಥೋಯೇನ ಕೃತೋಽನುರಾಗಃ ।
ಸದ್ಧರ್ಮಸೇವಾದಿ ಗುರೌ ಕ್ಷಮಾದೌ ॥
ನಿಜಾತ್ಮನಿಂದಾ ಚ ಪರಪ್ರಶಂಸಾ ।
ಸ ಏವ ಭವ್ಯಃ ಸಕಲಪ್ರಿಯಶ್ಚ ॥೧೬೭॥

ಅರ್ಥ :- ಧರ್ಮಾತ್ಮರಲ್ಲಿ ಸ್ನೇಹವನ್ನು ಧರ್ಮಬಂಧುಗಳಲ್ಲಿ ಅನುರಾಗ ವನ್ನು ತೀರ್ಥಂಕರರಲ್ಲಿ ಮತ್ತು ಸರ್ವಸಂಘ ಪರಿತ್ಯಾಗಿಗಳಾದ ಮುನಿಗಳಲ್ಲಿ ಅನುರಾಗಯುಕ್ತ ಭಕ್ತಿಯಿಡುತ್ತಾನೆಯೊ, ಉತ್ತಮ ಕ್ಷಮಾದಿ ಹತ್ತು ಪ್ರಕಾರದ ಧರ್ಮಗಳಲ್ಲಿ ಪ್ರೀತಿಯನ್ನು ಗುಣವಂತರ ಗುಣಗಳ ಪ್ರಶಂಸೆಯನ್ನು ಇಟ್ಟು ತನ್ನನ್ನು ನಿಂದಿಸಿಕೊಳ್ಳುವ ಭವ್ಯಾತ್ಮನು ಮರಣಾನಂತರ ಶ್ರೇಷ್ಠ ಮಾನವನಾಗಿ ಜನಿಸಿ ಸಕಲ ಜೀವಗಳ ಪ್ರೇಮಭಾಜನನಾಗುವನು.

ಭಾವಾರ್ಥ :- ಧರ್ಮದಲ್ಲಿ ಪ್ರೇಮದಿಂದವರ್ತಿಸುವ ಧರ್ಮಾತ್ಮರಲ್ಲಿ ಅನುರಾಗವನ್ನಿಡುವವನು ಧರ್ಮಪ್ರೇಮಿಯು ಅವನಿಂದ ದೇವ, ಗುರು, ಶಾಸ್ತ್ರಗಳಲ್ಲಿ ಭಕ್ತಿ, ಪೂಜೆ, ಆರಾಧನೆಮಾಡಲು ಸಾಧ್ಯವು. ಈ ಪ್ರಕಾರ ಯಾವ ಭವ್ಯಾತ್ಮನು ಧರ್ಮಪ್ರೇಮದ ಪ್ರಭಾವದಿಂದಲೇ ಸರ್ವಜನ ಪ್ರಿಯನಾಗುತ್ತಾನೆ ನೋಡಿರಿ! ಧರ್ಮಪ್ರೇಮವೇ ಧರ್ಮಾರಾಧನೆಗೆ ಸಾಧನವು ಪರಿಪಾಲಿಸಲು ಸಾಧ್ಯವಾಗುತ್ತದೆ. ಆತ ನಿಶ್ಚಯವಾಗಿ ತೀರ್ಥಂಕರ ಪರಮ ದೇವನಾಗಿಯೇ ಜನಿಸುವನು. ಆತನೆ ಮಾನವ, ತಿರ್ಯಂಚ ಮತ್ತು ದೇವತೆಗಳಿಂದ ಪೂಜ್ಯನು ಪ್ರಿಯಪಾತ್ರನಾಗುವನು. ಮಾತ್ರವಲ್ಲ; ಅವರ ವೈಭವಾದಿ ಪುಣ್ಯಾತಿಶಯವು ಅತಿಶ್ರೇಷ್ಠವಾಗಿರುತ್ತದೆ. ಆದ್ದರಿಂದ ಭವ್ಯ ಜೀವಗಳು ದಯಾಧರ್ಮದಲ್ಲಿ ಪ್ರೀತಿ, ಭಕ್ತಿಯನ್ನಿಡಬೇಕು. ಅದು ನಿಜವಾದ ಆತ್ಮಶಾಂತಿಗೆ ಕಾರಣವಾಗಿದೆ.

ಮುಂದಕ್ಕೆ ಮನೆಮನೆಗಳಲ್ಲಿ ಮಂಗಲಕಾರ್ಯಗಳು ಜರುಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಗೃಹೇಗೃಹೇ ಮಂಗಲಗೀತವಾದ್ಯಂ ॥

ಅರ್ಥ :- ಹೇ ಕರುಣಾಸಾಗರನೇ! ಯಾವಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರ ಮಹತ್ತರ ಪುಣ್ಯದ ಫಲವಾಗಿ ಮನೆಮನೆಗಳಲ್ಲಿ ಮಂಗಲಗೀತೆಗಳು, ಮಂಗಲವಾದ್ಯಗಳು ಮತ್ತು ಮಂಗಲಕಾರ್ಯಗಳು ನಡೆಯುವವೆಂಬುದನ್ನು ವಿವರಿಸಬೇಕು.

ಉತ್ತರ :- ಮಹೋತ್ಸವೋ ಯೇನ ಜಿನಾರ್ಚನಾದಿ ।
ಭಕ್ತ್ಯಾಕೃತಾ ತೀರ್ಥಕರ ಸ್ತುತಿಶ್ಚ ॥
ದೂರೀಕೃತಂ ದುಃಖಚಯಂ ಜನಾನಾಮ್ ।
ಸನ್ಮಂಗಲಂ ಸ್ಯಾತ್ಖಲು ತದ್ಗೃಹಾದೌ ॥೧೯೮॥

ಅರ್ಥ :- ಭಕ್ತಿಭಾವಯುಕ್ತನಾಗಿ ತೀರ್ಥಂಕರ ಪರಮದೇವನನ್ನು ಪೂಜಿಸುವವನು, ಪಂಚಕಲ್ಯಾಣಾದಿ ಮಹೋತ್ಸವಗಳನ್ನು ಮಾಡಿಸುವವನು,



ಜಿನೇಂದ್ರರ ಗುಣಕೀರ್ತನೆಯಲ್ಲಿ ಕಾಲವನ್ನು ಕಳೆಯುವವನು, ಇವೇ ಮೊದಲಾದ ಸತ್ಕಾರ್ಯಗಳನ್ನು ಮಾಡುವ ಪುಣ್ಯಾತ್ಮನ ಗೃಹದಲ್ಲಿ ಸದಾಕಾಲವೂ ಮಂಗಲಮಹೋತ್ಸವಗಳು ಜರುಗುತ್ತಿರುತ್ತವೆ.

ಭಾವಾರ್ಥ :- ಪೂರ್ವಜನ್ಮದಲ್ಲಿ ಧರ್ಮೋತ್ಸವ, ರಥೋತ್ಸವಾದಿ ಜಿನಾಲಯಗಳನ್ನು ಕಟ್ಟಿಸಿ ಪ್ರತಿಷ್ಠಾಮಹಾವಿಧಿ, ಜಿನಬಿಂಬಪ್ರತಿಷ್ಠಾಪೂಜೆ, ವ್ರತಪಾಲನೆ, ನೋಂಪಿ, ಉದ್ಯಾಪನೆಮಾಡಿಸುವ ಮಹಾಮಾನವನು ಪರಲೋಕದಲ್ಲಿ ಜನಿಸಿ ನಾನಾ ಉತ್ಸವಗಳ ಪಾತ್ರನಾಗುತ್ತಾನೆ. ಆತನ ಗೃಹದಲ್ಲಿ ಪ್ರತಿನಿತ್ಯವು ಮಂಗಲ ಉತ್ಸವಗಳು ಜರಗುತ್ತವೆ. ಆದ್ದರಿಂದ ಪ್ರತಿಯೊಬ್ಬ ಮಾನವನು ಧರ್ಮಕಾರ್ಯಗಳನ್ನು ಆಚರಿಸಿಕೊಂಡಿರಬೇಕು.

ಮುಂದಕ್ಕೆ ಮಧುರ ವಚನಪ್ರಾಪ್ತಿಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದೇತಿ ವಾಣೀ ।
ಪ್ರಿಯಾ ಭವೇತ್ಕೋಕಿಲ ವಜ್ಜನಾನಾಮ್ ॥

ಅರ್ಥ :- ಹೇ ಪರಮದೇವನೇ ! ಎಂಥಹ ಉತ್ತಮ ಕಾರ್ಯಗಳನ್ನು ಮಾಡಿದರೆ ಈ ಜೀವನಿಗೆ ಕೋಗಿಲೆಯ ಶಬ್ದದಂತೆ ಮಧುರವಾಣಿಯು ಪ್ರಾಪ್ತವಾಗುವುದೆಂಬುದನ್ನು ವರ್ಣಿಸಬೇಕು.

ಉತ್ತರ :- ಸರಸ್ವತೀನಾಂ ಸತತಂ ಸುಸೇವಾಂ ।
ಜಿನೇಂದ್ರಭಕ್ತಿಂ ಕೃತವಾನ್ ಸುಗೀತ್ಯಾ ॥
ಸಮ್ಯಕ್ ಪ್ರಯತ್ನಂ ಪ್ರಿಯಭಾಷಣಾರ್ಥಂ ।
ತೇಷಾಂ ಭವೇತ್ಕೋಕಿಲ ತುಲ್ಯವಾಣೀ ॥೧೯೯॥

ಅರ್ಥ :- ಜಿನವಾಣೀರೂಪ ಶಾರದಾದೇವಿಯನ್ನು ಸದಾಕಾಲವು ಸೇವಿಸಿಕೊಂಡಿರುವ, ಮೃದು-ಮಧುರಗೀತಗಳನ್ನು ಹಾಡುತ್ತ ಜಿನಗುಣ ಸ್ತುತಿಸುವ ಮತ್ತು ಪ್ರಿಯಭಾಷಣೆಯ ಸಲುವಾಗಿ ಸತತವು ಪ್ರಯತ್ನಿಸುವ ಪುರುಷರ ವಾಣಿಯು ಪರಜನ್ಮದಲ್ಲಿ ಕೋಗಿಲೆಯ ವಾಣಿಯಂತೆ ಮಧುರವೂ, ಪ್ರಿಯವೂ ಆಗಿರುತ್ತದೆ.

ಭಾವಾರ್ಥ :- ಪೂರ್ವಜನ್ಮದಲ್ಲಿ ನಾನಾ ಸ್ತೋತ್ರ, ಭಕ್ತಿಗೀತೆಗಳನ್ನು ಮಾಡಿ, ಅನೇಕವಿಧ ಗದ್ಯ, ಪದ್ಯಮಯ ಕವಿತೆಗಳನ್ನು ರಚಿಸಿ ಭಕ್ತಿಯನ್ನು ಪ್ರಕಟಿಸುವನೋ, ಧಾರ್ಮಿಕ ಲೇಖನಾದಿಗಳನ್ನು ಬರೆದು ಧರ್ಮಪ್ರಚಾರ, ಚತುಃಸಂಘಗಳಿಗೆ ಗ್ರಂಥಸಮರ್ಪಣೆಮಾಡುವುದು. ಶಾಸ್ತ್ರಸ್ವಾಧ್ಯಾಯದ ವ್ಯವಸ್ಥೆ ಮೊದಲಾದ ಜಿನವಾಣೀರೂಪ ಸರಸ್ವತೀಮಾತೆಯ ಸೇವೆಯನ್ನು ಸತತವು ಹಿತ, ಮಿತ, ಪ್ರಿಯವಾಚನಗಳನ್ನಾಡಲು ಯತ್ನಿಸುವುದು ಇವೇ ಮೊದಲಾದ ಶ್ರೇಷ್ಠ ಕಾರ್ಯಗಳನ್ನು ಮಾಡಲು ಉದ್ಯುಕ್ತನಾದ ಮಾನವನು ಪರಲೋಕದಲ್ಲಿ ಜನಿಸಿ ಮಧುರ ಸ್ವರವು ಸರ್ವರ ಕರ್ಣಗಳಿಗೆ ಹಿತಕರವು, ಕೋಗಿಲೆಯ ಸ್ವರದಂತೆ ಪಂಚಮವೂ ಆದ ಧ್ವನಿಯನ್ನು ಪ್ರಾಪ್ತಮಾಡಿಕೊಳ್ಳುವನು. ಆದ್ದರಿಂದ ಸಕಲ ಭವ್ಯಾತ್ಮರು ನಿರಂತರ ಭಗವದ್ಭಕ್ತಿ ಜಿನವಾಣೀ ಸೇವೆ, ಮೊದಲಾದ ಸತ್ಕಾರ್ಯಗಳಲ್ಲಿ ಕಾಲಹರಣಮಾಡುವುದು ಮಂಗಳಕರವಾಗಿರುತ್ತದೆ.

ಮುಂದಕ್ಕೆ ಶಾಂತಿ ಸಮಾಧಾನವುಂಟಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸಂತೋಷಶಾಂತೇಶ್ಚ ವಿಶೇಷಲಾಭಃ ॥

ಅರ್ಥ :- ಹೇ ಪ್ರಭುವೇ ! ಯಾವ ಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರ ಪ್ರಭಾವದಿಂದ ಈ ಜೀವನಿಗೆ ಸಂತೋಷ ಮತ್ತು ಶಾಂತಿಯ ವಿಶೇಷ ಲಾಭವಾಗುವುದೆಂಬುದನ್ನು ದಯಮಾಡಿ ವಿವರಿಸಿರಿ.

ಉತ್ತರ :- ನಿರ್ಗ್ರಂಥ ಸಾಧೋಶ್ಚ ಜಿನಾಗಮಸ್ಯ ।
ಚಿತ್ತಾಕ್ಷಜೇತುಶ್ಚ ವಿಶೇಷಸೇವಾ ॥
ಕೃತಾಸ್ತುತಿರ್ಯೇನ ಚ ತಸ್ಯಸಂಗಃ ।
ಸಂತೋಷ ಶಾಂತೇಶ್ಚ ವಿಶೇಷಲಾಭಃ ॥೧೭೦॥

ಅರ್ಥ :- ವೀತರಾಗ ನಿರ್ಗ್ರಂಥ ಸಾಧುಗಳ ಸೇವೆ, ಜಿನವಾಣಿಯ ಸೇವೆ, ಅರ್ಥಾತ್ ಪ್ರಚಾರ ಮತ್ತು ದೇವ, ಶಾಸ್ತ್ರ, ಗುರುಗಳಸ್ತುತಿ, ಸ್ತೋತ್ರ



ಮಾಡಿಕೊಂಡಿರುವ, ಅವರ ಸಂಗದಲ್ಲಿರುವ ಮಾನವನು ಸುಖಿ, ಸಂತೋಷ ಮತ್ತು ಶಾಂತಿಯ ಲಾಭವನ್ನು ಮಾಡಿಕೊಳ್ಳುವನು.

ಭಾವಾರ್ಥ :- ಸಂತೋಷ ಮತ್ತು ಶಾಂತಿಯ ಸ್ವರೂಪವನ್ನು ತಿಳಿದವನು ಆತ್ಮನ ಶುದ್ಧಸ್ವರೂಪದಲ್ಲಿ ನಿಜವಾದ ಸಂತೋಷ ಹಾಗೂ ಶಾಂತಿಯು ಏನೆಂಬುದನ್ನು ತಿಳಿಯಬಲ್ಲನು. ಆತ ಮಹಾಶಾಂತಿಯಲ್ಲಿ ಮಗ್ನನಾಗಿರುವ ಗುರುಸೇವೆ, ಸ್ತುತಿ, ಆಜ್ಞಾಪಾಲನೆಯಲ್ಲಿ ತತ್ಪರನಾಗುವನು. ಈ ಪ್ರಕಾರ ಅವನು ಭಗವಾನ್ ತೀರ್ಥಂಕರ ಪರಮದೇವರ ಭಕ್ತಿ, ಸ್ತುತಿ, ಪೂಜೆ ಆರಾಧನೆಯಲ್ಲಿಯೇ ಕಾಲವನ್ನು ಕಳೆಯುವನು. ಮತ್ತು ಜಿನವಚನ (ಶಾಸ್ತ್ರ) ಪ್ರಚಾರ ಮಾಡಿಕೊಂಡಿರುವ ಮಾನವನು ಪರಮ ಶಾಂತಿ, ಸಮಾಧಾನದ ಅಧಿಕಾರಿಯಾಗುವನು.

ಮುಂದಕ್ಕೆ ಪಾಪಕಾರ್ಯಗಳಿಂದುಂಟಾಗುವ ಧನದವೃದ್ಧಿಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ಸದಾಪಿ ಜಂತೋ ।
ರ್ವೃದ್ಧಿರ್ಭವೇತ್ಪಾಪ ಕೃತೇ ಧನಾದೇಃ ॥

ಅರ್ಥ :- ಹೇ ಸ್ವಾಮಿನ್ ! ಎಂತಹ ಪುಣ್ಯಕಾರ್ಯದಿಂದ ಪಾಪ ಕಾರ್ಯಗಳಿಗೆ ಉಪಯೋಗಕ್ಕೆ ಬರುವ ಧನದ ವೃದ್ಧಿಯಾಗುವುದೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಪರೋಪಕಾರಃ ಖಲು ಕೇವಲಂ ಯೈ ।
ರ್ಮಿಥ್ಯಾವ್ರತಂ ವಾ ಕುತಪಃ ಕೃತಂಚೇತ್ ॥
ಸ್ಯಾದೇವ ತೇಷಾಮಪಿ ತತ್ಪ್ರಭಾವಾತ್ ।
ವೃದ್ಧಿಃ ಸದಾ ಪಾಪಕೃತೇ ಧನಾದೇಃ ॥೧೭೦॥

ಭುಕ್ತಂ ಯಥಾನ್ನಂ ಹ್ಯುದರೇಚಯಾವತ್ ।
ತಿಷ್ಠೇನ್ನ ತಾವತ್ತು ದತಿ ಕ್ಷುಧಾದಿ ॥
ಪೂರ್ವಾರ್ಜಿತಂ ಪಾಪಮಪೀಹ ಯಾವತ್ ।
ಜಂತೋರ್ನ ಸತ್ಕಾರ್ಯಕೃತೇಪಿ ಶಾಂತಿಃ ॥೧೭೧॥

**ಅರ್ಥ** :- ಪೂರ್ವಜನ್ಮದಲ್ಲಿ ಕೇವಲ ಪರೋಪಕಾರಗಳನ್ನು, ಮಿಥ್ಯಾ ವ್ರತಗಳನ್ನು, ಮಿಥ್ಯಾ ತಪಸ್ಸನ್ನು ಮಾಡಿರುವುದರ ಪ್ರಭಾವವಾಗಿ ಪಾಪ ಸಂಪಾದಿಸುವುದಕ್ಕೋಸ್ಕರ ಧನದ ಪ್ರಾಪ್ತಿಯಾಗುತ್ತದೆ. ಎಷ್ಟರವರೆಗೆ ಹೊಟ್ಟೆ ಹಸಿವೆಯ ಬಾಧೆಯಿಲ್ಲದಿರುವವರೆಗೆ ಉಂಡ (ಭುಂಜಿಸಿದ) ಆಹಾರವು ಹೊಟ್ಟೆಯಲ್ಲಿರುವಂತೆ ಜೀವಗಳ ಸತ್ಕಾರ್ಯಗಳು ಶಾಂತಿಸುಖವನ್ನುಂಟು ಮಾಡಲಾರವೋ ಅಷ್ಟರವರೆಗೆ ಪೂರ್ವೋಪಾರ್ಜಿತ ಪಾಪಸಮೂಹವು ಇದ್ದೇ ಇರುತ್ತದೆ.

**ಭಾವಾರ್ಥ** :- ಎರಡು ವಿಧದ ಉಪಕಾರಗಳಿವೆ. ಅವುಗಳಲ್ಲಿ ತನ್ನಾತ್ಮ ಕಲ್ಯಾಣಮಾಡಿಕೊಳ್ಳುವ ಜೀವಗಳು ಪರಜೀವಗಳ ಕಲ್ಯಾಣಮಾಡಲು ಸಾಧ್ಯವಾಗುವುದು. ಯಾವ ಜೀವಗಳು ಸ್ವಯಂ ಅಭಕ್ಷ್ಯವಸ್ತುಗಳನ್ನು ಭುಂಜಿಸಿ ಜೀವಿಸುವವೋ ಅವು ಪರಜೀವಗಳಿಗೆ ಅಭಕ್ಷ್ಯವಸ್ತುಗಳ ತ್ಯಾಗಮಾಡಬೇಕೆಂದು ಉಪದೇಶಿಸಲಾರವು. ಒಂದುವೇಳೆ ಯಾವುದಾದರೊಂದು ಪ್ರಸಂಗವಶಾತ್ ಉಪದೇಶಿಸಿದರೂ ಕೂಡಾ ಅದರ ಪ್ರಭಾವವು ಅಷ್ಟು ಫಲಿಸಲಾರದು. ಗೃಹಸ್ಥರ ಸಹಸ್ರಾರು ಉಪದೇಶಗಳಿಂದ ಬೀಳುವ ಪ್ರಭಾವಕ್ಕಿಂತ ಮಹಾತ್ತರಾದ ಮುನಿ ಶ್ರೇಷ್ಠರ ಒಂದೇ ಒಂದು ವಾಕ್ಯದ ಪ್ರಭಾವವು ಫಲವತ್ತಾಗುವುದು. ಈ ವಿಷಯದಿಂದ ಆತ್ಮಕಲ್ಯಾಣದ ನಂತರವೇ ಅನ್ಯಜೀವಗಳ ಆತ್ಮಕಲ್ಯಾಣವು ಸ್ವಯಂ ಆಗುವುದೆಂದು ಸಿದ್ಧವಾಗುತ್ತದೆ. ಆದ್ದರಿಂದ ಯಾರು ತನ್ನ ಆತ್ಮಹಿತದ ಮಾರ್ಗವನ್ನು ಅವಲಂಬಿಸದೆ ಕೇವಲ ಪರರಿಗೆ ಉಪದೇಶವನ್ನೀಯುವುದು ಮತ್ತು ಉಪಕಾರಮಾಡುವುದು ಮಿಥ್ಯಾಸ್ವರೂಪವೆಂದೇ ತಿಳಿಯಬೇಕು. ಇದೇ ಪ್ರಕಾರವಾಗಿ ಮಿಥ್ಯಾತಪಸ್ಸನ್ನು ಮಾಡುವುದರಿಂದಲೂ, ಮಿಥ್ಯಾವ್ರತಗಳನ್ನು ಆಚರಿಸುವುದರಿಂದಲೂ, ಹಗಲೆಲ್ಲಾ ಉಪವಾಸದಿಂದಿದ್ದು ರಾತ್ರಿಯಲ್ಲಿ ತಿಂದುಕೊಂಡಿರುವುದರಿಂದಲೂ ಪುಣ್ಯಬಂಧವಾಗಲಾರದು. ಆತ್ಮಕಲ್ಯಾಣವು ದೂರವೇ ಹೋಗುವುದು. ಆದ್ದರಿಂದ ಅಂತಹ ತಪಸ್ಸು, ವ್ರತಗಳು ಪಾಪಾನುಬಂಧೀ ಪುಣ್ಯಬಂಧಕ್ಕೆ ಕಾರಣವಾಗಿರುತ್ತವೆ. ಯಾವ ಪುಣ್ಯಕಾರ್ಯಗಳಿಂದ ಪಾಪ ಬಂಧವಾಗುವುದಕ್ಕೆ ಪಾಪಾನುಬಂಧೀ ಪುಣ್ಯವೆಂದು ತಿಳಿಯಬೇಕು. ಮೇಲೆ ವಿವರಿಸಲ್ಪಟ್ಟಿರುವ ಮಿಥ್ಯಾತಪಸ್ಸಿನಿಂದಲೂ, ಮಿಥ್ಯಾವ್ರತಗಳಿಂದಲೂ



ಅವರುಗಳಿಗೆ ಪರಜನ್ಮದಲ್ಲಿ ಧನದ ಪ್ರಾಪ್ತಿಯಾಗುವುದು. ಆದರೆ ಅಂತಹ ಧನವು ಪಾಪಕಾರ್ಯಗಳಿಗಾಗಿಯೇ ವ್ಯಯವಾಗುವುದು. ಹೀಗೆ ಆದರಿಂದ ಮಹಾಪಾಪ ಉಂಟಾಗಿ ನರಕಾದಿ ಘೋರದುಃಖವು, ಮಿಥ್ಯಾವ್ರತಾದಿಗಳ ಮೂಲಕ ಬಂಧವಾಗುವ ಪಾಪಾನುಬಂಧೀಪುಣ್ಯದ ಉದಯವಿರುವವರೆಗೆ ಪ್ರಾಪ್ತವಾಗಿರುವ ಧನದಿಂದ ವ್ಯಸನಾದಿಗಳಿಂದ ಉಂಟಾದ ಪಾಪಕರ್ಮಗಳು ಉದಯಾವಸ್ಥೆಗೆ ಬರಲಾರವು. ಆ ಪಾಪಾನುಬಂಧೀಪುಣ್ಯದ ಉದಯವು ಸಮಾಪ್ತಿಯಾಗುವಾಗ ಪಾಪಕರ್ಮಗಳ ಉದಯವಾಗುವುದು. ಅದು ಪಾಪೀ ಜೀವಗಳ ಸುಖಕ್ಕೆ ಕಾರಣವಾಗುವುದೆಂದು ತಿಳಿಯಬೇಕು.

ಮುಂದಕ್ಕೆ ದೇವತೆಗಳು ಕೂಡಾ ಸೇವಕರಾಗಲು ಕಾರಣ ಹೇಳುತ್ತಾರೆ.

**ಪ್ರಶ್ನೆ** :- **ಕಸ್ಮಾದ್ಧಿ ಪುಣ್ಯಾಚ್ಚ ನೃಣಾಂ ಭವೇಯುಃ ।**
**ಸರ್ವೇಪಿ ದೇವಾಃ ಸುಜನಾಶ್ಚದಾಸಾಃ ॥**

**ಅರ್ಥ** :- ಹೇ ದಯಾಸಾಗರನೇ ! ಯಾವ ಯಾವ ಮಹತ್ತರವಾದ ಒಳ್ಳೇಕಾರ್ಯಗಳನ್ನು ಮಾಡಿರುವುದರ ಪುಣ್ಯಾತಿಶಯದಿಂದ ಎಲ್ಲಾ ದೇವತೆಗಳು ಈ ಮಾನವನ ದಾಸರಾಗಿ ಸೇವೆ ಸಲ್ಲಿಸುವರೆಂಬುದನ್ನು ದಯವಿಟ್ಟು ವಿವರಿಸಬೇಕು.

**ಉತ್ತರ** :- **ಸುಧಾರ್ಮಿಕಾ ವಾ ಸುಖಿನಶ್ಚ ಜೀವಾಃ ।**
**ಭವಂತು ಭಕ್ತಾಃ ಸುಗುರೋರ್ಜನಸ್ಯ ॥**
**ಪುರೇತಿ ಭಾವಶ್ಚ ಬಭೂವ ಯೇಷಾಂ ।**
**ಸರ್ವೇಪಿ ದೇವಾಶ್ಚ ಭವಂತಿ ದಾಸಾಃ** ॥೧೭೩॥

**ಅರ್ಥ** :- ಸಂಸಾರದ ಸಕಲ ಜೀವಗಳು ಸುಖಿಗಳಾಗಬೇಕು, ಧಾರ್ಮಿಕರಾಗಬೇಕು, ಜಿನೇಂದ್ರದೇವನ ಭಕ್ತರಾಗಬೇಕು ಮತ್ತು ವೀತರಾಗ ನಿರ್ಗ್ರಂಥ ಮುನಿಗಳ ಚರಣ ಸೇವಕರಾಗಬೇಕು. ಇವೇ ಮೊದಲಾದ ಉತ್ತಮೋತ್ತಮ ಭಾವನೆಯುಳ್ಳ ಜೀವಗಳು ಪರಜನ್ಮದಲ್ಲಿ ನರಶ್ರೇಷ್ಠರಾಗಿ ಜನಿಸುತ್ತಾರೆ. ದೇವತೆಗಳೂ ಅವರ ಸೇವಕರಾಗುತ್ತಾರೆ.

**ಭಾವಾರ್ಥ** :- ಭಾವನೆಯಿದ್ದಂತೆ ಶುಭ, ಅಶುಭ ಕರ್ಮಗಳ ಬಂಧವಾಗುತ್ತಿರುತ್ತದೆ. ಯಾವ ಜೀವವು ಸ್ವಯಂಮೋಕ್ಷ ಮಾರ್ಗದಲ್ಲಿದ್ದು ಪರರನ್ನು ಕೂಡಾ ಮೋಕ್ಷ-ಮಾರ್ಗದಲ್ಲಿ ನಡೆಯುವಂತೆ ಮಾಡಲು ಸತತವು ಪ್ರಯತ್ನಶೀಲನಾಗಿರುವನೋ, ಪಾಪಕಾರ್ಯಗಳಿಂದ ಬಿಡಿಸುವನೋ, ಅಹಿಂಸಾಮಯ ಜಿನಧರ್ಮದಲ್ಲಿ ವಿಶ್ವಾಸ ಉಂಟಾಗುವಂತೆ ಮಾಡುವ ಸದ್ಭಾವನೆಯುಳ್ಳದರ ಮಹತ್ತರ ಫಲವಾಗಿ ಸ್ವರ್ಗದಲ್ಲಿ ಉತ್ತಮ ಜೀವನಾಗಿ ಜನಿಸುವನು. ಅಲ್ಲಿ ಅನೇಕ ದೇವ ದೇವಿಯರಿಂದ ಪೂಜಿಸಲ್ಪಡುವನು. ಕ್ರಮೇಣ ಸ್ವರ್ಗೀಯ ಆಯುಷ್ಯವು ಮುಗಿಯಲು ಚಕ್ರವರ್ತಿ ಮೊದಲಾದ ಪದವಿಗಳನ್ನು ಪಡೆಯುವ ಶ್ರೇಷ್ಠ ಮನುಷ್ಯನಾಗಿ ಜನಿಸುತ್ತಾನೆ. ಆ ಅವಸ್ಥೆಯಲ್ಲಿ ಅನೇಕ ದೇವತೆಗಳು ಆತನ ಸೇವಕರಾಗಿ ಸೇವೆ ಸಲ್ಲಿಸುತ್ತಾರೆ. ಇದೆಲ್ಲವನ್ನು ತಿಳಿದು ಭವ್ಯಾತ್ಮರು ಸದಾಕಾಲ ತಮ್ಮ ಪರಿಣಾಮವನ್ನು ಶುಭರೂಪ ಧರ್ಮಧ್ಯಾನದಲ್ಲಿರಿಸಬೇಕು. ಮತ್ತು ಮೋಕ್ಷಮಾರ್ಗದಲ್ಲಿಯು ಉದ್ಯುಕ್ತರಾಗಬೇಕು.

ಮುಂದಕ್ಕೆ ಧನವನ್ನು ವ್ಯಯಮಾಡುತ್ತಿದ್ದರು ಧನದವೃದ್ಧಿಯಾಗಲು ಕಾರಣವನ್ನು ಹೇಳುತ್ತಾರೆ.

**ಪ್ರಶ್ನೆ** :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಧನಸ್ಯ ವೃದ್ಧಿರ್ಭವತಿ ವ್ಯಯೇಽಪಿ ॥

**ಅರ್ಥ** :- ಹೇ ದೇವನೇ ! ಯಾವ ಯಾವ ಸತ್ಕಾರ್ಯಗಳನ್ನು ಮಾಡಿರುವುರಿಂದ ಈ ಜೀವನು ತನ್ನ ದ್ರವ್ಯವನ್ನು ಎಷ್ಟೋ ವಿಧವಾಗಿ ಖರ್ಚು ಮಾಡುತ್ತಿದ್ದರೂ ಕೂಡಾ ಧನ-ವೃದ್ಧಿಯೇ ಆಗಲು ಕಾರಣವನ್ನು ಹೇಳಬೇಕು.

**ಉತ್ತರ** :- ಸುಪಾತ್ರದಾನೇ ಹಿ ಧನವ್ಯಯೇನ ।
ವೃದ್ಧಿರ್ಧನಾದೇಶ್ಚ ಭವೇನ್ನ ಹಾನಿಃ ॥
ನಿಷ್ಕಾಸನಾ ತ್ಕೂಪ ಜಲಸ್ಯ ಬುದ್ಧೇಃ ।
ರ್ಯಥಾನ್ಯ ವಿದ್ಯಾರ್ಥಿಜನಾಯ ದಾನಾತ್ ॥೧೭೪॥

**ಅರ್ಥ** :- ವೀತರಾಗ ನಿರ್ಗ್ರಂಥ ಮುನಿಗಳಿಗೆ ಆಹಾರದಾನ, ಔಷಧ ದಾನ, ಅಭಯದಾನ, ಮತ್ತು ಶಾಸ್ತ್ರದಾನ, ಮಾಡುವುದರಿಂದ ಭಕ್ತನಿಗೆ ಧನ



ಸಂಪತ್ತಿಯ ವೃದ್ಧಿಯಾಗುವುದಲ್ಲದೆ ಹಾನಿಯು ಸಂಭವಿಸಲಾರದು. ಉದಾ:- ಬಾವಿಯ ನೀರನ್ನು ಎಷ್ಟು ಸೇದುತ್ತಿದ್ದರು ಕೂಡಾ ನೀರು ಕಡಿಮೆ ಯಾಗದಿರುವಂತೆಯು, ವಿದ್ಯಾರ್ಥಿಗಳಿಗೆ ಓದಿಸುವುದರಿಂದ (ಜ್ಞಾನದಾನ ಮಾಡುವುದರಿಂದ ಜ್ಞಾನವು ಹೆಚ್ಚಾಗುವುದಲ್ಲದೆ) ಬುದ್ಧಿವೃದ್ಧಿಯಾಗುತ್ತಾ ಹೋಗುವುದು.

**ಭಾವಾರ್ಥ** :- ಬಾವಿಯಿಂದ ಪ್ರತಿ ನಿತ್ಯವು ನೀರನ್ನು ತೆಗೆಯುತ್ತಿದ್ದರು ಬಾವಿಯಲ್ಲಿ ಅಷ್ಟೇ ನೀರು ಬಂದೆ ಬರುತ್ತಿರುತ್ತದೆ. ಜ್ಞಾನ ದಾನದಿಂದಲೂ ಜ್ಞಾನವು ವೃದ್ಧಿಯಾಗುತ್ತಿರುವಂತೆ, ಸತ್ಪಾತ್ರಗಳಿಗೆ ದಾನಮಾಡುವುದರಿಂದ ಧನದ ಹಾನಿಯಾಗದೆ ಧನಲಕ್ಷ್ಮಿಯು ತಾಂಡವ ನೃತ್ಯವನ್ನೇ ಆಡುವಳು. ಪುಣ್ಯದ ಪ್ರಭಾವವು ಅತಿ ವಿಚಿತ್ರವಾಗಿರುತ್ತದೆ. ಆದ್ದರಿಂದ ಭವ್ಯರು ನಾಲ್ಕು ವಿಧ ದಾನಗಳನ್ನು ಮಾಡಿ ಪುಣ್ಯವನ್ನು ಸಂಪಾದಿಸಿಕೊಳ್ಳಬೇಕು.

ಮುಂದಕ್ಕೆ ಸರ್ವತ್ರ ಕೀರ್ತಿ ಹರಡಲು ಕಾರಣವನ್ನು ಹೇಳುತ್ತಾರೆ.

**ಪ್ರಶ್ನೆ** :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸರ್ವತ್ರ ಕೀರ್ತಿರ್ಭವತೀಹ ನೃಣಾಮ್ ॥

**ಅರ್ಥ** :- ಹೇ ಪ್ರಭುವೇ ! ಈ ಜೀವನು ಯಾವ ಯಾವ ಪುಣ್ಯ ಕಾರ್ಯಗಳನ್ನು ಮಾಡಿರುವುದರ ಫಲವಾಗಿ ಮಹಾನ್ ಕೀರ್ತಿಶಾಲಿಯಾಗುವನೆಂಬುದನ್ನು ದಯವಿಟ್ಟು ವಿವರಿಸಬೇಕು.

**ಉತ್ತರ** :- ಮಾನಾಪಮಾನೋ ಭವದಶ್ಚಯೇನ ।
ತ್ಯಕ್ತಃ ಕೃತಃ ಸರ್ವಹಿತಾಯ ಯತ್ನಃ ॥
ತಸ್ಯೈವ ಕೀರ್ತಿಃ ಶಶಿನೋ ವಿಶುದ್ಧಾ ।
ಸಮಸ್ತ ವಿಶ್ವೇ ಪ್ರಸರೇತ್ಪ್ರಭೇವ ॥೧೭೫॥

**ಅರ್ಥ** :- ಸಂಸಾರಕ್ಕೆ ಕಾರಣವಾದ ಮಾನ, ಅಪಮಾನಗಳನ್ನು ಲೆಕ್ಕಿಸದೆ ಸಕಲ ಜೀವಗಳ ಹಿತಕ್ಕೋಸ್ಕರ ಸತತವು ಪ್ರಯತ್ನಿಸುವ ಮಾನವನು ಚಂದ್ರನ ನಿರ್ಮಲ ಪ್ರಭೆಯಂತಿರುವ ಕೀರ್ತಿಯೆಂಬ ಬೆಳದಿಂಗಳು ಪ್ರಪಂಚದ ಮೂಲೆ ಮೂಲೆಗಳನ್ನು ವ್ಯಾಪಿಸುವುದು.

ಭಾವಾರ್ಥ :- ಚಂದ್ರನ ನಿರ್ಮಲವಾದ ತಿಂಗಳ ಬೆಳಕು ಮನುಜ ಲೋಕದಲ್ಲಿ ಹರಡಿ ಸಕಲ ಜೀವಜಾಲಗಳಿಗೆ ಆನಂದ, ಆಹ್ಲಾದವನ್ನುಂಟು ಮಾಡುವಂತೆ ಯಾವ ಪುರುಷನು ಜನ್ಮ ಜರಾ, ಮರಣ ರೂಪ ಸಂಸಾರವನ್ನು ಬೆಳೆಸುವ ಮಾನಾಪಮಾನಗಳನ್ನು ಬಿಟ್ಟು ಎಲ್ಲ ಜೀವಗಳ ಉದ್ಧಾರ, ಹಿತ ಕೋಸ್ಕರವಾಗಿ ಯತ್ನಿಸುವುದು, ದೇವಶಾಸ್ತ್ರ ಗುರುಗಳಲ್ಲಿ ಭಕ್ತಿ, ಅವರ ಆರಾಧನೆ ಮತ್ತು ಅವರ ಅನುಪಮ ಗುಣಗಳನ್ನು ಸ್ಮರಿಸುವ ಮಾನವನ ಪುಣ್ಯಾತಿಶಯದಿಂದ ಶುಭ್ರ, ನಿರ್ಮಲ ಕೀರ್ತಿಯು ಜಗತ್ತಿನಲ್ಲಿ ವ್ಯಾಪಿಸಿ, ಸಕಲ ಜೀವವರ್ಗಕ್ಕು ಸುಖಶಾಂತಿಯನ್ನೀಡುವಂಥದ್ದಾಗುವುದು.

ಮುಂದಕ್ಕೆ ಸುಂದರಶರೀರ ಪ್ರಾಪ್ತಿಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವಪುರ್ಮನೋಜ್ಞಂ ।
ವದ ಪ್ರಭೋ ! ಮೇ ಲಭತೇ ಮನುಷ್ಯಃ ॥

ಅರ್ಥ :- ಹೇ ಭಗವಾನ್ ! ಎಂತಹ ಸತ್ಕಾರ್ಯಗಳನ್ನು ಮಾಡಿರುವುದರಿಂದ ಈ ಮನುಷ್ಯನಿಗೆ ಪರಲೋಕದಲ್ಲಿ ಮನೋಹರವಾದ ಶರೀರ ಪ್ರಾಪ್ತಿಯಾಗುವುದೆಂಬುದನ್ನು ವರ್ಣಿಸಬೇಕು.

ಉತ್ತರ :- ಯಃ ಶುದ್ಧ ಚಿದ್ರೂಪಸುಖಸ್ಯಚರ್ಚಾಂ ।
ಕರೋತಿ ಚಾನಂದಪದೇ ಪ್ರವೃತ್ತಿಮ್ ॥
ಸ್ವಾನಂದತೃಪ್ತಸ್ಯ ಮುನೇಶ್ಚಸೇವಾಂ ।
ಸ ದಿವ್ಯದೇಹಂ ಲಭತೇ ಮನುಷ್ಯಃ ॥೧೭೬॥

ಅರ್ಥ :- ಸಚ್ಚಿದಾನಂದಮಯನಾದ ಶುದ್ಧಾತ್ಮನ ಅನಂತ ಸುಖಾದಿಗಳ ಸಂಬಂಧವಾಗಿ ಚರ್ಚಿಸಿಕೊಂಡಿರುವುದು, ತನ್ನಾತ್ಮ ಶುದ್ಧಸ್ವರೂಪದಲ್ಲಿಯೂ ಅಥವಾ ಆ ಸುಖಕ್ಕಾಗಿ ಪ್ರವರ್ತಿಸುವುದು ಮತ್ತು ಶುದ್ಧಾತ್ಮನಲ್ಲಿ ಸಂತೃಪ್ತರಾಗಿರುವ ಪರಮಯೋಗಿಗಳ ಸೇವೆಗೈಯುವ ಮಾನವನು ಪರಲೋಕದಲ್ಲಿ ದಿವ್ಯಮನೋಜ್ಞವಾದ ಶರೀರವನ್ನು ಧರಿಸುವನು.

ಭಾವಾರ್ಥ :- ಮಹಾಮುನಿಗಳ ಸೇವೆಗೈಯುವುದು, ಧರ್ಮಧ್ಯಾನದಲ್ಲಿರುವುದು, ಶುದ್ಧಧ್ಯಾನಮಾಡುವುದು, ಕಠಿಣತಪಸ್ಸು ಮಾಡುವುದು, ಹತ್ತು ಧರ್ಮ, ಮೂರು ಗುಪ್ತಿ, ಐದು ಸಮಿತಿಗಳನ್ನು ನಿರ್ದೋಷವಾಗಿ ಪಾಲಿಸುವುದು, ಪಾಪವನ್ನು ನಾಶಮಾಡುವುದು ಇವೇ ಮೊದಲಾದ ಕಾರ್ಯಗಳನ್ನು ಮಾಡುವ ಮನುಜನು ಮರಣಾನಂತರ ಪರಲೋಕದಲ್ಲಿ ದಿವ್ಯ ಶರೀರವನ್ನು ಧಾರಣೆಮಾಡುವ ದೇವಪರ್ಯಾಯವನ್ನು ಪಡೆಯುತ್ತಾನೆ. ಅಲ್ಲಿಯ ಸುಖವನ್ನು ಅನುಭವಿಸಿ ಆಯುಷ್ಯವು ಪೂರ್ಣವಾದೊಡನೆ ಕಾಮದೇವನಾಗಿ ಅಥವಾ ಕಾಮದೇವನಂತಿರುವ ಮನೋಹರ ಶರೀರಧಾರಕನಾದ ನರರತ್ನನಾಗಿಯೇ ಜನಿಸುವನು.



ಮುಂದಕ್ಕೆ ಮಾನವರಲ್ಲಿ ಶ್ರೇಷ್ಠ ಮಾನವನಾಗಿ ಜನಿಸಲು ಕಾರಣ ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ಜನಾಃ ಪ್ರಭೋ ! ಮೇ ।
ಸನ್ಮಾನ್ಯತಾಂ ಶ್ರೇಷ್ಠಜನೇಽಪಿ ಯಾಂತಿ ॥

ಅರ್ಥ :- ಹೇ ಭಗವಾನ್ ! ಎಂತಹ ಕಾರ್ಯಗಳನ್ನು ಮಾಡುವುದರಿಂದ ಈ ಜೀವನು ಶ್ರೇಷ್ಠ ಪುರುಷರಲ್ಲಿಯೂ ಪೂಜ್ಯ ಮಾನವನಾಗಿ ಜನಿಸುವನೆಂಬುದನ್ನು ದಯವಿಟ್ಟು ಅಪ್ಪಣೆ ಕೊಡಿಸಬೇಕು.

ಉತ್ತರ :- ಪುರಾಭವೇ ಸರ್ವನೃಣಾಂ ಹಿತಾಯ ।
ಕೃತಃ ಪ್ರಯತ್ನೋ ವಿನಯೋಪಚಾರ ॥
ಸತಾಂ ಯಥಾಯೋಗ್ಯ ನತಿಕ್ರಿಯಾಯ್ಯೈ ।
ಸ್ತೇ ಯೋಗ್ಯತಾಂ ಶ್ರೇಷ್ಠ ಜನೇಪಿ ಯಾಂತಿ ॥೧೭೭॥

ಅರ್ಥ :- ಮೊದಲಿನ ಜನ್ಮದಲ್ಲಿ ಸಕಲ ಜೀವಿಗಳ ಕ್ಷೇಮಕ್ಕೋಸ್ಕರ ಪ್ರಯತ್ನಶೀಲನಾಗುವುದು, ಸಾಧುಸಜ್ಜನರಲ್ಲಿ ವಿನಯ, ಅವರವರ ಯೋಗ್ಯತೆಗೆ ತಕ್ಕಂತೆ ವಿನಯ ವಂದನೆಗೈಯುವ ಮಾನವನು ಮರಣಾನಂತರ ಪರಲೋಕದಲ್ಲಿ ಉತ್ತಮ ಮಾನವರಲ್ಲಿ ಸರ್ವೋತ್ತಮ ಸದ್ಗುಣಶಾಲಿಯಾದ ಮಾನವನಾಗಿಯೇ ಬೆಳಗುವನು.

ಭಾವಾರ್ಥ :- ಯೋಗ್ಯಕಾರ್ಯಗಳನ್ನು ಮಾಡುವುದರಿಂದಲೇ ಲೋಕದಲ್ಲಿ ಯೋಗ್ಯತೆಯು, ಆದರ ಸತ್ಕಾರವು ಹೆಚ್ಚುವುದು. ಸರ್ವಜೀವಗಳ ಹಿತಕ್ಕಾಗಿಯು, ದುಃಖಿ ಜನರ ದುಃಖ ನಿವಾರಿಸುವುದಕ್ಕಾಗಿಯು, ರೋಗಿಗಳ ರೋಗ ನಿವಾರಣೆಗಾಗಿ ಔಷಧೋಪಚಾರಕ್ಕಾಗಿಯು, ಹೊಟ್ಟೆಹಸಿವೆಯಿಂದಲೂ, ಬಾಯಾರಿಕೆಯಿಂದಲೂ ಬಳಲಿದವರಿಗೆ ಆಹಾರ ಜಲಾದಿಗಳನ್ನೀಯುವುದಕ್ಕಾಗಿಯು, ಸತತವು ಪ್ರಯತ್ನಿಸುವವನು, ಮತ್ತು ಸಾಧು ಸಜ್ಜನರ ಸೇವೆ ಮೊದಲಾದ ಧಾರ್ಮಿಕ ಕಾರ್ಯಗಳನ್ನು ಮಾಡಿಕೊಂಡಿರುವ ಮಾನವನು ಪರಲೋಕದಲ್ಲಿ ಜನ್ಮತಾಳಿ ಉತ್ತಮ ಪುರುಷರಲ್ಲಿ ಯೋಗ್ಯನು ಮಾನವೀಯ ನರರತ್ನನಾಗಿ ಪ್ರಸಿದ್ಧಿಯಾಗುವನು.

ಮುಂದಕ್ಕೆ ಪಾಪಾನುಬಂಧೀಪುಣ್ಯದ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಕಾರ್ಯಾಚ್ಚ ಜನಸ್ಯಲೋಕೇ ।
ಪಾಪಾನುಬಂಧ್ಯಂ ಚ ಕರೋತಿ ಪುಣ್ಯಮ್ ॥

ಅರ್ಥ :- ಹೇ ಪರಮದೇವನೇ! ಈ ಮಾನವನು ಯಾವಯಾವ ಕಾರ್ಯಗಳನ್ನು ಮಾಡಿರುವುದರ ಫಲವಾಗಿ ಪಾಪಾನುಬಂಧೀ ಪುಣ್ಯಬಂಧವನ್ನುಂಟುಮಾಡಿಕೊಳ್ಳುವನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಮಂದೋದಯಾತ್ಕರ್ಮಣ ಏವ ಜೀವಃ ।
ಮಿಥ್ಯಾತ್ವಯುಕ್ತಂ ಚ ಕರೋತಿ ಪುಣ್ಯಮ್ ॥
ಸುಖಸ್ಯಲೇಶಂ ಭುವಿ ದರ್ಶಯಿತ್ವಾ ।
ಪ್ರಾಪ್ನೋತಿ ಜೀವಂ ಭುವಿ ಪಾಪಮಾರ್ಗೇ ॥೧೭೪॥

ಅರ್ಥ :- ಈ ಮಾನವನು ಪಾಪಕರ್ಮಗಳ ಮಂದ ಉದಯವಿರುವಾಗ ಮಿಥ್ಯಾತ್ವಭಾವನೆಯೊಡಗೂಡಿದ ಪುಣ್ಯಕಾರ್ಯಗಳನ್ನು ಮಾಡುತ್ತಾನೆ. ಆ ಪುಣ್ಯಕರ್ಮವು ಪರಲೋಕದಲ್ಲಿ ಜನ್ಮತಾಳಿದನಂತರವೇ ಅಲ್ಪಸ್ವಲ್ಪ ಸುಖವನ್ನುಂಟುಮಾಡುತ್ತದೆ. ಆದರೂ ಮತ್ತೆ ಆತನನ್ನು ಪಾಪಕಾರ್ಯಗಳಲ್ಲಿ ಓಡಾಡಿಸುತ್ತದೆ.



ಭಾವಾರ್ಥ :- ಮಿಥ್ಯಾತ್ವಭಾವದೊಡಗೂಡಿದ ಅಲ್ಪಕಾರ್ಯಗಳನ್ನು ಮಾಡುವ ಜೀವಗಳಿಗೆ ಅಲ್ಪಪುಣ್ಯಬಂಧವಾದರು ಮಿಥ್ಯಾತ್ವಕರ್ಮನಿಮಿತ್ತದಿಂದ ಪಾಪಕರ್ಮಗಳ ಬಂಧವು ಅಧಿಕಸಂಖ್ಯೆಯಲ್ಲಾಗುವುದು. ಅಂತಹ ಪುಣ್ಯಕ್ಕೆ ಪಾಪಾನುಬಂಧೀ ಪುಣ್ಯವೆಂದು ಹೇಳುತ್ತಾರೆ. ಆ ಪುಣ್ಯದ ಉದಯದಿಂದ ಸ್ವಲ್ಪ ಸುಖಪ್ರಾಪ್ತಿಯಾದರು ಆ ಸುಖದಿಂದ ಮತ್ತು ಆ ಪುಣ್ಯದ ಉದಯದಿಂದ ಪ್ರಾಪ್ತವಾದ ಧನಸಂಪತ್ತಿಗಳ ಮೂಲಕ ಅಧಿಕವು. ಪಾಪಕರ್ಮಗಳ ಕಾರ್ಯಗಳಲ್ಲಿಯೇ ಇಳಿಯುವನು. ಮತ್ತೆ ಆ ಪಾಪದ ಫಲವಾಗಿ ನರಕಾದಿದುಃಖವನ್ನೇ ಅನುಭವಿಸುತ್ತಾನೆ. ಆದ್ದರಿಂದ ನಿಜವಾದ ಸುಖೇಚ್ಛುವು ಮಿಥ್ಯಾತ್ವವನ್ನು ಮೊದಲು ಬಿಡಬೇಕು. ಮಿಥ್ಯಾತ್ವವೇ ಸಕಲದುಃಖಗಳ ಮೂಲವಾಗಿರುತ್ತದೆ.

ಮುಂದಕ್ಕೆ ಪುಣ್ಯಾನುಬಂಧೀಪುಣ್ಯದ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಥಂ ಕದಾಯಂ ಭುವಿ ಭವ್ಯಜೀವಃ ।
ಪುಣ್ಯಾನುಬಂಧ್ಯಂಚ ಕರೋತಿ ಪುಣ್ಯಮ್ ॥

ಅರ್ಥ :- ಹೇ ದಯಾಸಾಗರನೇ! ಈ ಭವ್ಯ ಜೀವನು ಯಾವಾಗ ಮತ್ತು ಎಂತಹ ಪುಣ್ಯಾನುಬಂಧೀ ಪುಣ್ಯವನ್ನು ಪ್ರಾಪ್ತ ಮಾಡಿಕೊಳ್ಳುವನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಭವ್ಯೋಜನೋ ದರ್ಶನ ಮೋಹನಾಶಾದ್ ।
ಯತ್ಕಿಂಚಿದೇವಂ ಹಿ ಶುಭಂ ಕರೋತಿ ॥
ಪುಣ್ಯಾನುಬಂಧ್ಯಂ ಕಥಿತಂ ತದೇವ ।
ತದ್ಯೋಗತೋ ಯಾತಿ ಶಿವಂ ಸಯೋಗೀ ॥೧೭೫॥

ಅರ್ಥ :- ದರ್ಶನ ಮೋಹನೀಯ ಕರ್ಮದ ನಾಶವಾಗುತ್ತಿರಲು ಯಾವ ಪುಣ್ಯ ಕಾರ್ಯಗಳು ಭವ್ಯಾತ್ಮನಿಂದ ಆಗುವವೋ ಆದಕ್ಕೆ ಪುಣ್ಯಾನುಬಂಧೀ ಪುಣ್ಯವೆಂದು ಹೇಳುತ್ತಾರೆ, ಈ ಪುಣ್ಯಾನುಬಂಧೀ ಪುಣ್ಯದ ನಿಮಿತ್ತದಿಂದ ಯೋಗಿಯು ಕ್ರಮೇಣ ಮುಕ್ತಿಯನ್ನೇ ಪಡೆಯುತ್ತಾನೆ.

ಭಾವಾರ್ಥ :- ಈ ಸಂಸಾರದಲ್ಲಿ ದರ್ಶನ ಮೋಹನೀಯ ಕರ್ಮವು ಸಕಲ ಕರ್ಮಗಳಿಗೆ ಕಾರಣವಾಗಿರುತ್ತದೆ. ಅದು ನಾಶವಾದೊಡನೆ ನಿರ್ಮಲವಾದ ಸಮ್ಯಗ್ದರ್ಶನವು ಪ್ರಕಟವಾಗುತ್ತದೆ. ಆಗ ಜೀವನು ತನ್ನಾತ್ಮನ ಯಥಾರ್ಥ ಸ್ವರೂಪವನ್ನು ತಿಳಿಯಲು ಮತ್ತು ಆತ್ಮನಿಂದ ಭಿನ್ನವಾದ ಶರೀರಾದಿ ಪರ ಪದಾರ್ಥಗಳ ಸ್ವರೂಪ ಬೋಧವೂ ಕೂಡ ಆಗುತ್ತದೆ. ಅವೆರಡರ ಸ್ವರೂಪವನ್ನು ತಿಳಿದೊಡನೆ ಶುದ್ಧಾತ್ಮ ಸ್ವರೂಪ ಗ್ರಹಣೆಯಾಗಿ ಶುದ್ಧಾತ್ಮನಿಂದ ರಾಗ ದ್ವೇಷಾದಿ ವಿಕಾರ ಭಾವಗಳನ್ನು ತ್ಯಜಿಸಿ ಬಿಡುತ್ತಾನೆ. ಅದರ ಪ್ರಭಾವದಿಂದ ಪಾಪ-ಕರ್ಮಗಳು ಹತ್ತಿರ ಸುಳಿಯಲಾರವು. ಆತ ಯಾವ ಕಾರ್ಯಗಳನ್ನು ಮಾಡುತ್ತಿದ್ದರು ಅವು ಪುಣ್ಯ ರೂಪವಾಗಿಯು ಶುಭ ರೂಪವಾಗಿಯು ಪರಿಣಮಿಸುತ್ತವೆ. ಅಂತಹ ಪುಣ್ಯ ಕಾರ್ಯಗಳಿಂದಾಗುವ ಯಾವ ಪುಣ್ಯ ಕರ್ಮಬಂಧವಾಗುತ್ತದೆಯೋ ಅದಕ್ಕೆ ಪುಣ್ಯಾನುಬಂಧೀ ಪುಣ್ಯವೆಂದು ಹೇಳುತ್ತಾರೆ. ಅದರ ನಿಮಿತ್ತದಿಂದ ತೀರ್ಥಂಕರ, ಚಕ್ರವರ್ತಿ, ಕಾಮದೇವ, ಬಲದೇವರೇ ಮೊದಲಾದ ಶ್ರೇಷ್ಠ ಪದವಿಗಳನ್ನು ಧಾರಣೆ ಮಾಡುವ ಅತಿ ಶ್ರೇಷ್ಠ ಮಾನವ ಪರ್ಯಾಯವನ್ನು ಪಡೆದು ಅಂತ್ಯದಲ್ಲಿ ಜೈನೇಶ್ವರೀ ದೀಕ್ಷೆಯನ್ನು ಧರಿಸುತ್ತಾರೆ. ಘೋರ ತಪಸ್ಸನ್ನು ಆಚರಿಸಿ ಸಕಲ ಕರ್ಮಗಳನ್ನು ನಾಶ ಮಾಡುತ್ತಾರೆ. ಅವಿನಾಶೀ ಸುಖದ ಸ್ಥಾನವಾದ ಸಿದ್ಧ ಪದವಿಯನ್ನು ಪಡೆಯುತ್ತಾರೆ. ಆದ್ದರಿಂದ ಭವ್ಯಾತ್ಮರು ಮೊದಲು ಮೋಹನೀಯ ಕರ್ಮವನ್ನು ನಾಶಮಾಡಿ ಸಮ್ಯಗ್ದರ್ಶನವನ್ನು ಪಡೆಯಬೇಕು. ಅದರಿಂದಲೇ ಮೋಕ್ಷಲಕ್ಷ್ಮಿಯು ಸಮೀಪಿಸುವಳೆಂಬುದನ್ನು ಮರೆಯಬಾರದು.

ಮುಂದಕ್ಕೆ ಪರಸ್ಪರ ಶಾಂತಿಪ್ರಾಪ್ತಿಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಮಿಥೋ ಜನಾನಾಂ ಭವತೀಹ ಶಾಂತಿಃ ॥

ಅರ್ಥ :- ಹೇ ಪರಮದೇವನೇ ಎಂತಹ ಉತ್ತಮಕಾರ್ಯಗಳನ್ನು ಮಾಡಿರುವುದರ ಫಲವಾಗಿ ಸಕಲಜೀವಗಳಲ್ಲಿ ಶಾಂತಿಯು ನೆಲೆಸುವುದೆಂಬುದನ್ನು ವಿವರಿಸಬೇಕು.



ಉತ್ತರ :- ಗೂರೂಪದೇಶಾಮೃತ ಪಾನತೃಪ್ತಾ ।
ದಕ್ಷಾಸದಾ ಯೇ ಸ್ವಪರೋಪಕಾರೇ ॥
ತೇಷಾಂ ಜನಾನಾ ಶಿವವಾಂಛಕಾನಾ- ।
ಮಿಹಾನ್ಯಲೋಕೇಽಪಿ ಮಿಥಃ ಪ್ರಶಾಂತಿಃ ॥೧೮೦॥

ಅರ್ಥ :- ವೀತರಾಗ ನಿರ್ಗ್ರಂಥ ಮಹಾಗುರುಗಳ ಉಪದೇಶರೂಪ ಅಮೃತವನ್ನು ಪಾನಮಾಡಿ ಸದಾಕಾಲ ತೃಪ್ತನಾಗಿರುವ, ತನ್ನಾತ್ಮಕಲ್ಯಾಣ ಮತ್ತು ಪರಜೀವಗಳ ಆತ್ಮಕಲ್ಯಾಣಮಾಡಿಕೊಳ್ಳುವುದರಲ್ಲಿಯು, ಚತುರರಾಗಿರುವ ಮೋಕ್ಷೇಚ್ಛುಗಳಿಗೆ ಇಹಲೋಕದಲ್ಲಿ ಸದಾ ಸರ್ವರೊಡನೆ ಶಾಂತಿ ಸಮಾಧಾನವು, ಪರಲೋಕದಲ್ಲಿಯು ಶಾಂತಿಸಮಾಧಾನವು ಉದ್ಭವಿಸುವುದು.

ಭಾವಾರ್ಥ :- ಆತ್ಮನ ಶಾಂತಸ್ವಭಾವನ್ನು ತಿಳಿಯುವ ಭವ್ಯಜೀವನು ಯಾವಾಗಲು ಶಾಂತಿಸಮಾಧಾನದಿಂದ ಕಾಲವನ್ನು ಕಳೆಯುತ್ತಾನೆ. ಅವರು ಪಂಚಪರಮೇಷ್ಠಿಗಳಲ್ಲಿ ಭಕ್ತಿ, ಪೂಜೆಯನ್ನು, ಆಚಾರ್ಯ, ಉಪಾಧ್ಯಾಯ, ಸರ್ವಸಾಧುಗಳ ಆಜ್ಞಾಪಾಲನೆಯನ್ನು, ಅವರ ಉಪದೇಶಾಮೃತದಿಂದ ತಮ್ಮ ಆತ್ಮ ಸಂತೃಪ್ತಿಪಡೆಸಿಕೊಳ್ಳುತ್ತಾರೆ. ವ್ರತ, ಉಪವಾಸ ಮತ್ತು ಧ್ಯಾನಾದಿಗಳ ಮೂಲಕ ಆತ್ಮಶುದ್ಧಿಯನ್ನು ಸಾಧಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ; ಅನ್ಯ ಭವ್ಯಜೀವಗಳನ್ನು ಅದೇ ಮಾರ್ಗದಲ್ಲಿ ಪ್ರವರ್ತಿಸುವಂತೆ ಪ್ರೇರೇಪಿಸುತ್ತಾರೆ. ಅಂತಹ ಜೀವಗಳು ಇಹಲೋಕದಲ್ಲಿ ನಿರಾಕುಲರಾಗಿ ಶಾಂತಿಯಿಂದ ಕಾಲವನ್ನು ಕಳೆಯುತ್ತಾರೆ. ಮತ್ತು ಮರಣಾನಂತರ ಪರಲೋಕದಲ್ಲಿ ಜನಿಸಿ ಪರಮ ಶಾಂತಿಯಸಾಗರದಲ್ಲಿ ಸ್ನಾನಮಾಡಿಕೊಂಡಿರುತ್ತಾರೆ.

ಮುಂದಕ್ಕೆ ಸರ್ವಾರ್ಥಸಿದ್ಧಿಯಲ್ಲಿ ಉತ್ಪನ್ನನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸರ್ವಾರ್ಥ ಸಿದ್ಧಿಂ ಲಭತೇ ಮನುಷ್ಯಃ ॥

ಅರ್ಥ :- ಹೇ ಭಗವಾನ್ ! ಈ ಜೀವನು ಯಾವಯಾವ ಸತ್ಕಾರ್ಯಗಳನ್ನು ಮಾಡಿರುವುದರಿಂದ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರನಾಗಿ ಜನಿಸುವನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಧರ್ಮಾನುರಾಗತ್ಸ್ವಪದಾಭಿಲಾಷಾತ್ ।
ಸ್ವಸ್ವಾದಿನಃ ಪಂಚಗುರೋಃ ಕೃಪಾಬ್ಧೇಃ ॥
ಸೇವಾವಿಶೇಷಾಚ್ಛುಭಶುಕ್ಲಯೋಗಾತ್ ।
ಸರ್ವಾರ್ಥಸಿದ್ಧಿಂ ಲಭತೇ ಮನುಷ್ಯಃ ॥೧೮೦॥

ಅರ್ಥ :- ಸದಾಕಾಲವು ಧರ್ಮದಲ್ಲಿ ಅನುರಾಗವುಳ್ಳ ತನ್ನಾತ್ಮನ ಶುದ್ಧಸ್ವರೂಪದ ಪ್ರಾಪ್ತಿಯ ಅಭಿಲಾಷೆಯುಳ್ಳ ಕರುಣಾಸಾಗರರೂ ಆದ ಪಂಚಪರಮೇಷ್ಠಿಗಳ ಭಕ್ತಿಯನ್ನು, ಧರ್ಮ ಮತ್ತು ಶುಕ್ಲಧ್ಯಾನಗಳಲ್ಲಿ ತತ್ಪರರಾದ ಜೀವಗಳು ಸರ್ವಾರ್ಥಸಿದ್ಧಿಯಲ್ಲಿ ಜನ್ಮತಾಳುವರು.

ಭಾವಾರ್ಥ :- ಸ್ವರ್ಗಗಳಲ್ಲಿ ಸರ್ವಾರ್ಥಸಿದ್ಧಿಸ್ವರ್ಗವು ತುತ್ತತುದಿಯಲ್ಲಿರುವುದು. ಅದು ಶ್ರೇಷ್ಠ ವಿಮಾನವೂ ಆಗಿರುತ್ತದೆ. ಅಲ್ಲಿಯ ದೇವತೆಗಳ ಶರೀರಪ್ರಮಾಣವು ಒಂದು ಹಸ್ತ(ಒಂದುಮೊಳ)ವಾಗಿರುತ್ತದೆ. ಅವರು ಅಹಮಿಂದ್ರರೆಂದು ಕರೆಯಲ್ಪಡುತ್ತಾರೆ. ಅವರ ಆಯುಷ್ಯ ಪ್ರಮಾಣವು ಮುವತ್ತಮೂರು ಸಾಗರವಾಗಿರುತ್ತದೆ. ಅವರು ತಮ್ಮ ವಿಮಾನವನ್ನು ಬಿಟ್ಟು ಬೇರೆಕಡೆಗೆ ಹೋಗುವುದಿಲ್ಲವು. ಅಲ್ಲಿಯೇ ಇದ್ದು ಜೀವಾದಿ ಸಪ್ತತತ್ವಗಳ ಚರ್ಚೆಯಲ್ಲಿ ಕಾಲವನ್ನು ಕಳೆಯುತ್ತಾರೆ. ಅವರ ಆಯುಷ್ಯವು ತೀರಿದೊಡನೆ ಶ್ರೇಷ್ಠ ನರರತ್ನರಾಗಿಯೇ ಜನಿಸುವರು. ಪ್ರಾಪ್ತವಾದ ಮಾನವ ಪರ್ಯಾಯದಿಂದ ಘೋರತಪಸ್ಸನ್ನು ಮಾಡಿ ನಿಶ್ಚಯವಾಗಿ ನಿರ್ವಾಣಪದವಿಯನ್ನೇ ಪಡೆಯುವರು. ಇಂತಹ ಸರ್ವಾರ್ಥಸಿದ್ಧಿದೇವತ್ವವು ಉಗ್ರತಪಶ್ಚರಣೆಯ ಪ್ರಭಾವದಿಂದಲೂ, ಉತ್ಕೃಷ್ಟ ಧರ್ಮಧ್ಯಾನ ಮತ್ತು ಶುಕ್ಲಧ್ಯಾನದಿಂದಲೂ, ಪಂಚಪರಮೇಷ್ಠಿಗಳ ಆರಾಧನೆಯಿಂದಲೂ ಮತ್ತು ದಯಾಧರ್ಮದ ಧಾರಣೆಯಿಂದಲೂ ಸಿದ್ಧಿಸುವುದು.

ಮುಂದಕ್ಕೆ ತೀರ್ಥಂಕರ ಪದವಿಯ ಪ್ರಾಪ್ತಿಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಪ್ರಬಧ್ಯತೇ ತೀರ್ಥಕರಸ್ಯ ಪುಣ್ಯಮ್ ॥



ಅರ್ಥ :- ಹೇ ದಯಾಸಾಗರನೇ ! ಯಾವ ಮತ್ತು ಎಂತಹ ಪುಣ್ಯ ಕಾರ್ಯ(ಲೋಕೋದ್ಧಾರಕ ಕಾರ್ಯ)ಗಳನ್ನು ಮಾಡಿರುವುದರ ಮಹತ್ಫಲವಾಗಿ ತೀರ್ಥಂಕರ ಪರಮ ದೇವನ ಪದವಿಯು ಲಭ್ಯವಾಗುವುದೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಸಂಸಾರ ಸಿಂಧೌ ಪತಿತಾನ್ ಜನಾನ್ ಹಿ ।
ಚೋದ್ಧೃತ್ಯ ಯತ್ನೋ ಭುವಿ ಯೈಃ ಕೃತಶ್ಚ ॥
ಶುದ್ಧೇ ಸದಾ ಸ್ಥಾಪಯಿತುಂ ಸ್ವಧರ್ಮೇ ।
ತೈರ್ಬಧ್ಯತೇ ತೀರ್ಥಕರಸ್ಯ ಪುಣ್ಯಮ್ ॥೧೮೨॥

ಅರ್ಥ :- ಸಮ್ಯಗ್ದೃಷ್ಟೀ ಮಾಹಾಪುರುಷನು ಸಂಸಾರ ರೂಪ ಮಹಾ ದುಃಖ ಸಾಗರದಲ್ಲಿ ತೊಳಲುತ್ತ ಬಳಲುತ್ತಿರುವ ಜೀವಗಳನ್ನು ಮೇಲಕ್ಕೆತ್ತಿ ತಮ್ಮ ಆತ್ಮನ ಸ್ವರೂಪದಲ್ಲಿ ಲವಲೀನರನ್ನಾಗಿ ಮಾಡುತ್ತಾರೆ. ಅವರು ತೀರ್ಥಂಕರ ಪರಮ ದೇವರ ಪದವಿಗೆ ಯೋಗ್ಯವಾದ ಪುಣ್ಯ ಪ್ರಕೃತಿಯಬಂಧ ಮಾಡಿಕೊಳ್ಳುತ್ತಾರೆ.

ಭಾವಾರ್ಥ :- ಶುದ್ಧ ಸಮ್ಯಗ್ದೃಷ್ಟಿಯಾಗಿರುವವನು ದರ್ಶನ ವಿಶುದ್ಧ್ಯಾದಿ ಷೋಡಶ ಭಾವನೆಗಳನ್ನು ಭಾವಿಸುತ್ತ ಸಕಲ ಜೀವಗಳ ದುಃಖವನ್ನು ಹೋಗಲಾಡಿಸುವ ವಿಚಾರವಿರುವ ಮತ್ತು ಸರ್ವರಿಗೆ ಆತ್ಮ ಕಲ್ಯಾಣದ ಮಾರ್ಗವನ್ನು ಬೋಧಿಸುವ ಮಹಾನ್ ಜೀವಗಳಿಗೆ ತೀರ್ಥಂಕರ ಪ್ರಕೃತಿಯ ಬಂಧವಾಗುವುದು. ಯಾರು ತಮ್ಮ ಸಮ್ಯಗ್ದರ್ಶನವನ್ನು ನಿರ್ಮಲವನ್ನಾಗಿಟ್ಟುಕೊಳ್ಳುವುದು, ಪಂಚ ಪರಮೇಷ್ಠಿಗಳಲ್ಲಿ ವಿನಯ, ನಿರತಿಚಾರವಾಗಿ ವ್ರತ ಪರಿಪಾಲನೆ, ನಿರಂತರ ಜ್ಞಾನಾಭ್ಯಾಸದಲ್ಲಿ ತತ್ಪರನಾಗುವಿಕೆ, ಸಂಸಾರದಿಂದ ಭಯಪಡುವಿಕೆ, ತನ್ನ ಶಕ್ತಿಗೆ ಅನುಸಾರ ತಪಸ್ಸನ್ನು, ದಾನವನ್ನು ಮಾಡುವಿಕೆ, ಅರಹಂತಭಕ್ತಿ, ಆಚಾರ್ಯಭಕ್ತಿ, ಉಪಾಧ್ಯಾಯಭಕ್ತಿ, ಶ್ರುತ ಭಕ್ತಿ ಮಾಡುವಿಕೆ, ಷಡಾವಶ್ಯಕ ಕಾರ್ಯಗಳನ್ನು ಉತ್ಸಾಹದಿಂದ ಮಾಡುವಿಕೆ, ಧರ್ಮಪ್ರಭಾವನೆ, ಧರ್ಮಾತ್ಮರಲ್ಲಿ ಅನುರಾಗ ಇವೇ ಮೊದಲಾದ ಭಾವನೆಗಳಿಗೆ ಷೋಡಶ(ಹದಿನಾರು) ಭಾವನೆಗಳೆಂದು ಹೇಳುತ್ತಾರೆ. ಇವುಗಳ ಚಿಂತನೆ

ಯಿಂದಲೇ ತೀರ್ಥಂಕರ ಪ್ರಕೃತಿಯ ಬಂಧವಾಗುತ್ತದೆ. ಆ ಸಾತಿಶಯ ಪುಣ್ಯದ ಉದಯದಿಂದ ಸಮವಸರಣ ವಿಭೂತಿಯು, ಅಷ್ಟಮಹಾಪ್ರಾತಿಹಾರ್ಯಗಳು ಮತ್ತು ಜನ್ಮಾತಿಶಯ ಹತ್ತು, ಕೇವಲ ಜ್ಞಾನಾತಿಶಯ ಹತ್ತು, ದೇವಕೃತ ಅತಿಶಯ ಹದಿನಾಲ್ಕು ಹೀಗೆ ಮುವತ್ತು ನಾಲ್ಕು ಅತಿಶಯಗಳ ಪ್ರಾಪ್ತಿಯಾಗುತ್ತದೆ. ಇಂದ್ರಾದಿ ದೇವತೆಗಳು ಸೇವೆ ಸಲ್ಲಿಸುತ್ತಾರೆ. ಈ ಎಲ್ಲ ಅತಿಶಯಗಳು ವಿಭೂತಿಗಳು ತೀರ್ಥಂಕರ ಪರಮದೇವರಿಗೆ ಉಂಟಾಗುತ್ತವೆ. ಅವರು ಪೂರ್ವ ಜನ್ಮದಲ್ಲಿ ಭಾವಿಸಿರುವ ಭಾವನೆಯ ಪ್ರಭಾವದಿಂದ ಸಕಲ ಜೀವರಾಶಿಗೆ ಮೋಕ್ಷ ಮಾರ್ಗೋಪದೇಶವನ್ನು ಬೋಧಿಸುತ್ತಾರೆ. ಜೀವಗಳ ಕಲ್ಯಾಣ ಮಾಡುತ್ತಾರೆ.

ಮುಂದಕ್ಕೆ ಆಚಾರ್ಯರು ಈ ಅಧ್ಯಾಯದ ಉಪಸಂಹಾರ ಮಾಡುತ್ತಾರೆ.

ಉತ್ತರ :- ಸ್ವಶುದ್ಧ ಚಿದ್ರೂಪ ಪದಾಶ್ರಿತೇನ ।
ಶ್ರೀಕುಂಥುನಾಮ್ನಾ ವರ ಸೂರಿಣೇತಿ ॥
ಶುಭೋಪ ಯೋಗಸ್ಯ ಮಯಾಕ್ಷ ಸೌಖ್ಯ ।
ದಾತುಃ ಸ್ವರೂಪಃ ಕಥಿತೋಽಕ್ಷ ಶಾಂತ್ಯೈ ॥೧೮೩॥

ಅರ್ಥ :- ತನ್ನ ಆತ್ಮನ ಶುದ್ಧ ಚೈತನ್ಯ ಸ್ವರೂಪದಲ್ಲಿ ತನ್ಮಯನಾಗಿರುವ ಆಚಾರ್ಯ ಶ್ರೀ ಕುಂಥುಸಾಗರನಾದ ನಾನು ಇಂದ್ರಿಯ ಮತ್ತು ಮನಸ್ಸುಗಳಿಗೆ ಶಾಂತಿಯನ್ನುಂಟುಮಾಡುವ ಸುಖವನ್ನೀಯುವ ಶುಭೋಪಯೋಗದ ಸ್ವರೂಪವನ್ನು ವಿವರ್ಣಿಸಿರುತ್ತೇನೆ.

ಭಾವಾರ್ಥ :- ಈ ಎರಡನೆಯ ಅಧ್ಯಾಯದಲ್ಲಿ ಶುಭೋಪಯೋಗದ ವಿವರ್ಣೆಯು ಮಾಡಲ್ಪಟ್ಟಿರುತ್ತದೆ. ಅದರ ಸತ್ಫಲವಾದ ಇಂದ್ರಿಯಸುಖ, ಐಹಿಕ ಸುಖ ಸಾಮಗ್ರಿಗಳು ಪ್ರಾಪ್ತವಾಗುತ್ತವೆ. ಕ್ರಮೇಣ ಆ ಇಂದ್ರಿಯ ಸುಖ ಮತ್ತು ಐಹಿಕ ಸುಖಗಳಿಂದ ವಿರಕ್ತನಾಗಲು ಹಾಗೆ ಇಂದ್ರಿಯ ಮತ್ತು ಮನಸ್ಸನ್ನು ವಶದಲ್ಲಿಟ್ಟುಕೊಳ್ಳುವುದಕ್ಕಾಗಿಯೂ ವರ್ಣಿಸಿರುತ್ತಾರೆ.

**ಇತಿ ಆಚಾರ್ಯವರ್ಯ ಶ್ರೀ ಕುಂಥುಸಾಗರ ವಿರಚಿತೇ ಭಾವತ್ರಯ ಫಲ ಪ್ರದರ್ಶಿನಾಮ್ನಿ ಗ್ರಂಥೇ ಶುಭೋಪಯೋಗ ಫಲ ವರ್ಣನಂ ನಾಮ ದ್ವಿತೀಯೋಽಧ್ಯಾಯಃ**



**ಈ ಪ್ರಕಾರ ಆಚಾರ್ಯವರ್ಯ ಶ್ರೀ ಕುಂಥುಸಾಗರ ವಿರಚಿತ ಭಾವತ್ರಯ** ಫಲ ಪ್ರದರ್ಶೀ ಗ್ರಂಥದ ''ಧರ್ಮರತ್ನ'' ಪಂಡಿತ ಲಾಲಾ ರಾಮಶಾಸ್ತ್ರಿಗಳ ಹಿಂದೀ ಟೀಕೆಯಿಂದ ಸಿದ್ಧಾಂತಾಚಾರ್ಯ ಶ್ರೀಕಾಂತ ಶಾಸ್ತ್ರಿಯವರ ಸರಳ ಕನ್ನಡ ಭಾಷಾನುವಾದಯುಕ್ತ ಶುಭೋಪಯೋಗ ಫಲವನ್ನು ವಿವರಿಸುವ ಎರಡನೆಯ ಅಧ್ಯಾಯವು.

**॥ ಸಮಾಪ್ತ ॥**

# ಮೂರನೆಯ ಅಧ್ಯಾಯ

॥ ಶುದ್ಧೋಪಯೋಗ ವರ್ಣನಂ ॥

ಶುದ್ಧಸ್ವರೂಪ ನಿರೂಪಣೆ –

ನಿರ್ದ್ವಂದ್ವಂ ನಿರ್ಮದಂ ಸಿದ್ಧಂ ಶಾಂತಂ ನತ್ವಾ ಶಿವಪ್ರದಮ್ ।
ಶುದ್ಧೋಪಯೋಗರೂಪಂ ಹಿ ವಕ್ಷ್ಯೇ ಶುದ್ಧಾತ್ಮ ಸಿದ್ಧಯೇ ॥೧೮೪॥

ಯದ್ವಿನಾ ಜಂತುನೋ ಜನ್ಮ ಬ್ರವೀತಿ ದುಃಖದಂ ವೃಥಾ ।
ಚಿದಾನಂದಮಯಸ್ಯೈವ ಸ್ವಾಮೀ ಶ್ರೀಕುಂಥುಸಾಗರಃ ॥೧೮೫॥

ಅರ್ಥ :- ಸಕಲ ಸಂಕಲ್ಪ ವಿಕಲ್ಪರಹಿತರು, ಮದವಿಲ್ಲದವರು, ಮಹಾ ಶಾಂತಸ್ವರೂಪರೂ ಮತ್ತು ಮೋಕ್ಷದಾತೃವಾದ ಸಿದ್ಧಪರಮಾತ್ಮರನ್ನು ವಂದಿಸಿ ಚಿದಾನಂದಮಯ ಶುದ್ಧ ಆತ್ಮಸ್ವರೂಪೀ ಕುಂಥುಸಾಗರನಾದ ನಾನು ನನ್ನ ಆತ್ಮರುಗಳು ಶುದ್ಧತೆಯನ್ನು ಪಡೆಯುವುದಕ್ಕಾಗಿ ಶುದ್ಧೋಪಯೋಗದ ಸ್ವರೂಪವನ್ನು ವಿವರಿಸುತ್ತೇನೆ. ಕಾರಣ ಅದಿಲ್ಲದೆ ಜೀವನವೇ ನಿಷ್ಫಲವು.

ಸ್ವಾನುಭವದ ಸ್ವಾಮಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸ್ವಾತ್ಮಾನುಭೂತೇಶ್ಚ ಪತಿಃ ಪ್ರಿಯಃ ಸ್ಯಾತ್ ॥

ಅರ್ಥ :- ಹೇ ಪ್ರಭುವೇ ! ಯಾವಯಾವ ಶ್ರೇಷ್ಠ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲವಾಗಿ ಈ ಜೀವನು ತನ್ನ ಶುದ್ಧ ಆತ್ಮನ ಅನುಭವದ ಸ್ವಾಮಿಯಾಗುವನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಸ್ವಾನಂದ ತುಷ್ಟಸ್ಯಮುನೇಃ ಪ್ರಶಂಸಾ ।
ಕೃತಾಕ್ಷಮಾದ್ ನಿಜತತ್ವಚರ್ಚಾ ॥



ಶಿವಪ್ರದಾ ಯೇನ ನಿಜಾತ್ಮಶುದ್ಧಿಃ ।
ಸ್ವಾತ್ಮಾನುಭೂತೇಃ ಸ ಪತಿಃ ಪ್ರಿಯಃ ಸ್ಯಾತ್ ॥೧೮೬॥

ಅರ್ಥ :- ಯಾವ ಜೀವನು ತನ್ನಾತ್ಮನ ಶುದ್ಧಸ್ವರೂಪದಲ್ಲಿ ಸಂತುಷ್ಟರಾಗಿರುವ ಮುನಿಗಳನ್ನು ಪ್ರಶಂಸಿಸುವನೋ, ಉತ್ತಮ ಕ್ಷಮಾದಿ ದಶಧರ್ಮಗಳನ್ನು ಪ್ರಾಪ್ತಮಾಡಿಕೊಳ್ಳುವ ಆತ್ಮನ ಶುದ್ಧಸ್ವರೂಪ ಚರ್ಚೆಯಲ್ಲಿಯೇ ಕಾಲ ಕಳೆಯುವನೋ, ಆ ಪುರುಷನು ಶುದ್ಧಾತ್ಮಾನುಭೂತಿಯ ಪತಿಯೂ ಪ್ರಿಯನೂ ಆಗುತ್ತಾನೆ.

ಭಾವಾರ್ಥ :- ಶುದ್ಧಾತ್ಮಾನುಭೂತಿಸ್ವರೂಪವನ್ನು ಮತ್ತು ಮಹಿಮೆಯನ್ನು ತಿಳಿಯುವವನು ಯತಿಶ್ರೇಷ್ಠರನ್ನು ಪ್ರಶಂಸೆ, ಸ್ತುತಿ, ಮತ್ತು ವೈಯಾವೃತ್ಯ ಮಾಡುವವನು. ಇದೇ ಪ್ರಕಾರ ತನ್ನಾತ್ಮನ ಶುದ್ಧಸ್ವರೂಪದ ವಿಚಾರವಾಗಿ ಚರ್ಚೆ ಮತ್ತು ಅವರ ಗುಣಗಳನ್ನು ತಿಳಿಯಲು ಪ್ರಯತ್ನಿಸುವನು. ಮಾತ್ರವಲ್ಲ; ತನ್ನನ್ನು ಶುದ್ಧೀಕರಿಸುವ ಕಾರ್ಯದಲ್ಲಿಯೂ, ಮೋಕ್ಷಲಕ್ಷ್ಮಿಯ ಪ್ರಾಪ್ತಿಯಲ್ಲಿಯೂ ಯತ್ನಿಸುವನು. ಅವನಿಗೆ ಶುದ್ಧಾತ್ಮಾನುಭೂತಿಯ ಅನುಭವದ ಅಧಿಕಾರತ್ವವು ಪ್ರಾಪ್ತವಾಗುವುದು.

ಮುಂದಕ್ಕೆ ಮನ, ವಚನ, ಕಾಯಗಳ ಸರಳತೆಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಬ್ರವೀತಿ ಯಸ್ಮಾನ್ಮನಸಾ ಯಥಾ ಯಃ ।
ಕರೋತಿ ವಾ ಚಿಂತಯತೀಹ ಕಸ್ಮಾತ್ ॥

ಅರ್ಥ :- ಮನಸ್ಸಿನಲ್ಲಿ ಚಿಂತಿಸುವಂತೆ ವಚನದಿಂದ ಹೇಳುವುದು, ಮಾತನಾಡಿದಂತೆ ಕಾರ್ಯವನ್ನು ಮಾಡುವುದು, ಇಂತಹ ಗುಣವಿಶೇಷತೆಯ ಕಾರಣವನ್ನು ದಯವಿಟ್ಟು ಅಪ್ಪಣೆಕೊಡಿಸಬೇಕು.

ಉತ್ತರ :- ದ್ರಷ್ಟುಃ ಪ್ರಬೋದ್ಧುಃ ಸ್ವಪರಾತ್ಮನೋ ವಾ ।
ದ್ವೇಷಸ್ಯ ರಾಗಸ್ಯ ವಿನಾಶಕರ್ತುಃ ॥
ಸಂಗಃ ಕೃತೋ ಯೇನ ನಿಜಾತ್ಮನೋ ಹಿ ।
ಬ್ರೂಯಾದ್ ಯಥಾ ಕೌ ಸುಕೃತಿಂ ನ ಕುರ್ಯಾತ್ ॥೧೮೭॥

ಅರ್ಥ :- ಶುದ್ಧಾತ್ಮ ಸ್ವರೂಪವನ್ನರಿತವನು. ನುರಿತವನೇ ರಾಗದ್ವೇಷಗಳನ್ನು ಹೊಡೆದೋಡಿಸಿರುವ ಮಹಾನುಭಾವರ ಸಂಗತಿಯಲ್ಲಿದ್ದು ತನ್ನ ಆತ್ಮನ ಶುದ್ಧ ಸ್ವರೂಪದಲ್ಲಿ ಲೀನನಾಗಿರುವವನು ಯಾವುದನ್ನು ಮನಸ್ಸಿನಲ್ಲಿ ವಿಚಾರಿಸಿರುವಂತೆ ಅದನ್ನು ವಚನ ದ್ವಾರ ಸ್ಪಷ್ಟಪಡಿಸುತ್ತಾನೆ, ವಚನವನ್ನಾಡಿದಂತೆ ಕಾರ್ಯವನ್ನೂ ಮಾಡುತ್ತಾನೆ.

ಭಾವಾರ್ಥ :- ಮನ, ವಚನ, ಕಾಯಗಳ ಸರಳತೆ, ಛಲ-ಕಪಟ ಭಾವ, ಲೋಭ, ಕ್ರೋಧ, ದುರಹಂಕಾರ ಮುಂತಾದ ದುರ್ಗುಣಗಳು ಇಲ್ಲದ ಮಾನವನು ತನ್ನ ಮನಸ್ಸಿನಲ್ಲಿ ಇದ್ದ ವಿಷಯವನ್ನೇ ಆಡುವನು, ಆಡಿದಂತೆ ಮಾಡುವನು. ಆದರೆ ಮನ ವಚನ ಕಾಯಗಳ ಸರಳತೆಯ ಪ್ರಾಪ್ತಿಯಾಗುವುದು ಮಹಾ ಕಠಿಣ ವಿಷಯ. ಶುದ್ಧಾತ್ಮ ತತ್ವವನ್ನು ತಿಳಿದು ಅದರಲ್ಲಿ ಲೀನನಾಗುತ್ತ ಸತ್ಸಂಗದಲ್ಲಿದ್ದು ಅವರಲ್ಲಿ ಭಕ್ತಿಯನ್ನು ಇಡುವ ಮಹಾನುಭಾವನ ಮನ, ವಚನ ಕಾಯಗಳು ಸರಳವಾಗಿರುತ್ತವೆ.

ಮನಃಪರ್ಯಾಯ ಜ್ಞಾನೋತ್ಪತ್ತಿಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ಸ್ಯಾ ।
ಜ್ಜೀವೋ ಮನಃ ಪರ್ಯಯ ಬೋಧಧಾರೀ ॥

ಅರ್ಥ :- ಹೇ ಭಗವಾನ್ ! ಯಾವ ಪುಣ್ಯ ಕಾರ್ಯಗಳನ್ನು ಮಾಡಿರುವುದರ ಫಲವಾಗಿ ಈ ಜೀವನು ಮನಃ ಪರ್ಯಾಯ ಜ್ಞಾನವನ್ನು ಪಡೆಯುವವನು ಎಂಬುದನ್ನು ವಿವರಿಸಬೇಕು.

ಉತ್ತರ :- ಧ್ಯಾನಂಚ ಧರ್ಮಂ ಸುತಪಃ ಪ್ರಕುರ್ವನ್ ।
ಯೋ ವಾ ಚಿದಾನಂತರಸೇನ ತೃಪ್ತಃ ॥
ರತ್ನತ್ರಯೀ ವಾ ಸಮಶಾಂತಿ ಮೂರ್ತಿಃ ।
ಸ ಸ್ಯಾನ್ಮನಃ ಪರ್ಯಾಯ ಬೋಧಧಾರೀ ॥೧೮॥

ಅರ್ಥ :- ಧರ್ಮಧ್ಯಾನ, ತಪಶ್ಚರಣ, ಶುದ್ಧಾತ್ಮ ಚಿಂತನ, ರೂಪ ವಿಜ್ಞಾನಮಯರೂಪ ರಸಾಸ್ವಾದನ, ರತ್ನತ್ರಯಗಳ ಆರಾಧನೆ, ಸಮತಾ ಭಾವ



ಮತ್ತು ಶಾಂತಿಯ ಪರಮ ಪ್ರಶಾಂತ ರೂಪಧಾರಕರಾದ ಮುನಿಶ್ರೇಷ್ಠರಿಗೆ ಮನಃ ಪರ್ಯಾಯವೆಂಬ ಜ್ಞಾನವು ಉಂಟಾಗುವುದು.

ಭಾವಾರ್ಥ :- ಮನಸ್ಸಿನಲ್ಲಿ ವಿಚಾರಿಸುವ ವಿಷಯಗಳನ್ನು ಪ್ರತ್ಯಕ್ಷವಾಗಿ ತಿಳಿಯುವ ಜ್ಞಾನಕ್ಕೆ ಮನಃ ಪರ್ಯಾಯ ಜ್ಞಾನವೆಂದು ಹೇಳುತ್ತಾರೆ. ಈ ಜ್ಞಾನವು ನಿರ್ಮಲ ರತ್ನತ್ರಯಧಾರಕರಾದ ಮಹಾಯೋಗಿವರ್ಯರಿಗೆ ಉಂಟಾಗುವುದು. ಅದರಲ್ಲಿ ಋಜುಮತಿ, ವಿಪುಲಮತಿಗಳೆಂದು ಎರಡು ಭೇದಗಳಿವೆ. ವಿಪುಲಮತೀ ಮನಃಪರ್ಯಾಯವನ್ನು ಧಾರಣೆ ಮಾಡಿರುವ ಆತ್ಮರು ಅದೇ ಭವದಲ್ಲಿ ಮೋಕ್ಷವನ್ನು ಪಡೆಯುವರು. ಋಜುಮತಿ ಮನಃಪರ್ಯಾಯವುಳ್ಳವರು, ಅದೇ ಪರ್ಯಾಯದಿಂದಾಗಲೀ ಅಥವಾ ಒಂದೆರಡು ಭವಗಳಲ್ಲಾಗಲೀ ಮೋಕ್ಷವನ್ನು ಪಡೆಯುವರು. ಇದು (ಮನಃಪರ್ಯಾಯ) ಘೋರ ತಪಸ್ವಿಗಳು, ಧ್ಯಾನಮಗ್ನರು, ಶುದ್ಧಾತ್ಮ ಸ್ವಭಾವದಲ್ಲಿ ನಿರತರು ಮತ್ತು ಶಾಂತಿ, ಕ್ಷಮಾ ಮೂರ್ತಿಗಳಾದ ಮುನಿಶ್ರೇಷ್ಠರಿಗೆ ಉಂಟಾಗುವುದು.

ಮುಂದಕ್ಕೆ ಕೇವಲ ಜ್ಞಾನಪ್ರಾಪ್ತಿಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಹೇತೋಶ್ಚ ವದ ಪ್ರಭೋ ! ಮೇ ।
ಜೀವೋಭವೇತ್ಕೇವಲ ಬೋಧಧಾರೀ ॥

ಅರ್ಥ :- ಹೇ ಕರುಣಾನಿಧೇ ! ಈ ಜೀವನು ಎಂಥಹ ಕಾರ್ಯಗಳನ್ನು ಮಾಡಿರುವುದರ ಮಹತ್ವದ ಫಲವಾಗಿ ಕೇವಲ ಜ್ಞಾನವನ್ನು ಪಡೆಯುವನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ದೃಗ್ಬೋಧ ಚಾರಿತ್ರಮಯೇ ಸ್ವರೂಪೇ ।
ತಿಷ್ಠೇನ್ನಿಜಾನಂದ ಪದೇ ಪವಿತ್ರೇ ॥
ಜ್ಞಾತಾಪಿ ದೃಷ್ಟಾಖಿಲ ವಸ್ತುನೋಯಃ ।
ಸ ಸ್ಯಾತ್ಕೃತೀ ಕೇವಲ ಬೋಧಧಾರೀ ॥೧೯॥

ಅರ್ಥ :- ಪರಮ ಪವಿತ್ರ ರತ್ನತ್ರಯರೂಪ ಆತ್ಮನಲ್ಲಿ ಮಗ್ನನಾಗಿರುವ, ಸಕಲ ಪದಾರ್ಥಗಳನ್ನು ನೋಡುವ ಸಮ್ಯಗ್‌ದೃಷ್ಟೀ ಪರಮೋತ್ಕೃಷ್ಟ ಮುನಿಶ್ರೇಷ್ಠರು ನಿಶ್ಚಯವಾಗಿಯೂ ಕೇವಲ ಜ್ಞಾನದ ಅಧಿಕಾರಿಯಾಗುವರು.

ಭಾವಾರ್ಥ :- ಕೇವಲ ಜ್ಞಾನ ಪ್ರಾಪ್ತಿಗೆ ಶುಕ್ಲ ಧ್ಯಾನವು ಮುಖ್ಯವಾದ ಕಾರಣವಾಗಿದೆ. ಶುಕ್ಲ ಧ್ಯಾನವಿಲ್ಲದೆ ಸಾಧ್ಯವೇ ಇಲ್ಲವು. ಮೋಹನೀಯ ಕರ್ಮವು ನಾಶವಾದೊಡನೆ ಜ್ಞಾನಾವರಣ, ದರ್ಶನಾವರಣ, ಮತ್ತು ಅಂತರಾಯ ಕರ್ಮಗಳು ನಾಶವಾಗುತ್ತವೆ, ಕೇವಲ ಜ್ಞಾನಜ್ಯೋತಿಯು ಬೆಳಗುವುದು. ಈ ಎಲ್ಲ ಶುಕ್ಲಧ್ಯಾನ ಪ್ರಭಾವದಿಂದಲೇ ದೂರವಾಗುವವು. ಶುಕ್ಲಧ್ಯಾನವಿಲ್ಲದೆ ಘಾತಿಕರ್ಮಗಳು ನಾಶವಾಗಲಾರವು. ಆ ಶುಕ್ಲಧ್ಯಾನವು ಶ್ರೇಣಿಗಳನ್ನೇರಿದ ನಂತರವೇ ಉದಯಿಸುವುದು. ಶ್ರೇಣಿಗಳನ್ನೇರುವಾಗ ಮುನಿಯು ಧರ್ಮ ಧ್ಯಾನದಲ್ಲಿರುವುದು ಅವಶ್ಯಕವು. ಮತ್ತೆ ಶುದ್ಧಾತ್ಮ ಧ್ಯಾನ, ಅದರಲ್ಲಿ ತನ್ಮಯತೆ, ತನ್ನ ಮತ್ತು ಪರಪದಾರ್ಥಗಳ ಜ್ಞಾತಾ, ದ್ರಷ್ಟನಾಗುತ್ತ ಸಕಲ ವಸ್ತುಗಳಿಂದ ಭಿನ್ನನೆಂಬ ಬೋಧವೂ, ಕೇವಲ ಆತ್ಮಮಯ, ರತ್ನತ್ರಯಮಯ ರೂಪನಾಗುತ್ತಾನೆ. ಅಂತಹ ಮುನಿಶ್ರೇಷ್ಠನು ತನ್ನ ಶುಕ್ಲ ಧ್ಯಾನರೂಪೀ ಮಹಾ ಅಗ್ನಿಯಿಂದ ಕರ್ಮಗಳನ್ನು ಸುಟ್ಟು ಹಾಕುತ್ತಾನೆ. ಹಾಗೆ ಗುಣಸ್ಥಾನಗಳಿಂದ ಅತೀತನಾಗುತ್ತಾನೆ. ಹೀಗೆ ಹನ್ನೆರಡನೆಯ ಗುಣಸ್ಥಾನದ ಅಂತ್ಯದಲ್ಲಿ ಜ್ಞಾನಾವರಣಾದಿ ಘಾತಿಕರ್ಮಗಳನ್ನು ನಾಶಮಾಡಿ ಕೇವಲ ಜ್ಞಾನವನ್ನು ಪಡೆಯುತ್ತಾನೆ. ಆಯುಷ್ಯವು ಮುಗಿದೊಡನೆ ಅವರು ಬಾಕಿ ಉಳಿದ ವೇದನೀಯಾದಿ ನಾಲ್ಕು ಅಘಾತಿ ಕರ್ಮಗಳನ್ನು ನಾಶಗೊಳಿಸಿ ಸಿದ್ಧ ಪದವಿಯನ್ನು ಪಡೆಯುತ್ತಾನೆ.

ಆತ್ಮೀಯ ಶುದ್ಧ ಸ್ವರೂಪದಲ್ಲಿ ಅನುರಾಗವುಂಟಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಹೇತೋಶ್ಚ ವದ ಪ್ರಭೋ! ಮೇ ।
ಪ್ರೀತಿಃ ಪವಿತ್ರೇ ಸ್ವಪದೇ ಭವೇದ್ಧಿ ॥

ಅರ್ಥ :- ಹೇ ಭಗವಾನ್! ಈ ಜೀವನಿಗೆ ಯಾವ ಯಾವ ಕಾರಣಗಳಿಂದ ತನ್ನಾತ್ಮನ ಶುದ್ಧ ಸ್ವರೂಪದಲ್ಲಿ ಅನುರಾಗವುಂಟಾಗುವುದೆಂಬುದನ್ನು ದಯವಿಟ್ಟು ವಿವರಿಸಿರಿ.

ಉತ್ತರ :- ದೃಗ್‌ವೃತ್ತ ಮೋಹಕ್ಷಯ ಸಂಭವಾ ಯಾ ।
ಸ್ವಾನಂದ ತುಷ್ಟೇ ಸುಗುರೌ ಪ್ರತೀತಿಃ ॥



ಶ್ರದ್ಧಾಸ್ವಧರ್ಮೇ ಭವತೀಹ ಪಶ್ಚಾತ್ ।
ಸ್ವಾನಂದ ಸಾಮ್ರಾಜ್ಯಪದೇ ಪ್ರವೇಶಃ ॥೯೦॥

ಅರ್ಥ :- ದರ್ಶನ ಮೋಹನೀಯ ಅಥವಾ ಚಾರಿತ್ರ ಮೋಹನೀಯ ಕರ್ಮದ ಕ್ಷಯ, ಕ್ಷಯೋಪಶಮವಾದೊಡನೆ ಮೊತ್ತಮೊದಲು ತನ್ನ ಶುದ್ಧಾತ್ಮನಲ್ಲಿ ಸಂತುಷ್ಟರಾಗಿರುವ ವೀತರಾಗ ನಿರ್ಗ್ರಂಥ ಗುರುಗಳಲ್ಲಿ ವಿಶ್ವಾಸವು, ಭಗವಾನ್ ಜಿನೇಂದ್ರ ದೇವನಿಂದ ಹೇಳಲ್ಪಟ್ಟ ಅಹಿಂಸಾಮಯ ಜಿನಧರ್ಮದಲ್ಲಿ ಶ್ರದ್ಧೆಯು ಉಂಟಾಗುತ್ತದೆ. ಆ ಮೇಲೆ ಜೀವನಿಗೆ ಚಿದಾನಂದಮಯ ಆತ್ಮನ ಶುದ್ಧ ಸ್ವರೂಪದಲ್ಲಿ ಅನುರಾಗವನ್ನಿಡಲು ಪ್ರವೇಶವಾಗುವುದು.

ಭಾವಾರ್ಥ :- ದರ್ಶನ ಮೋಹನೀಯ ಕರ್ಮದ ಉಪಶಮದಿಂದಲೂ, ಕ್ಷಯೋಪಶಮದಿಂದಲೂ ಅಥವಾ ಕ್ಷಯದಿಂದಲೂ, ದೇವ, ಶಾಸ್ತ್ರಗುರುಗಳಲ್ಲಿ ಶ್ರದ್ಧೆಯುಂಟಾಗುವುದು. ಭಗವಾನ್ ಸರ್ವಜ್ಞ ದೇವರಿಂದುಪದೇಶಿಸಲ್ಪಟ್ಟ ಸಪ್ತತತ್ವಗಳಲ್ಲಿಯು, ಷಡ್‌ದ್ರವ್ಯಗಳಲ್ಲಿಯು ಶ್ರದ್ಧೆಯುಂಟಾಗುವುದು. ಮಾತ್ರವಲ್ಲ ; ಮೋಕ್ಷ ಮಾರ್ಗದಲ್ಲಿಯು ಹಾಗೆಯೆ ತ್ಯಾಗ ಧರ್ಮದಲ್ಲಿಯು ನಂಬಿಕೆಯುಂಟಾಗುವುದು. ಆ ಮೇಲೆ ಆತನು ಆತ್ಮನ ನಿಜವಾದ ಸ್ವರೂಪವನ್ನರಿಯಲು ಪ್ರಯತ್ನಿಸುವಾಗ ತನ್ನ ಆತ್ಮನಿಂದ ಈ ಶರೀರ, ಪರಿಗ್ರಹ, ಬಂಧು ಬಾಂಧವ ಮತ್ತು ಧನಧಾನ್ಯ ಮುಂತಾದ ಪರಿಗ್ರಹಗಳು ಸರ್ವಥಾ ಭಿನ್ನಗಳಾಗಿರುತ್ತವೆ. ಆದ್ದರಿಂದ ತ್ಯಜಿಸಲು ಯೋಗ್ಯವಾಗಿರುತ್ತವೆ. ಹೇಯವೂ ಆಗಿರುತ್ತವೆಂದು ತಿಳಿಯುವಾಗಲೆ ಚಾರಿತ್ರ ಮೋಹನೀಯ ಕರ್ಮದ ಕ್ಷಯೋಪಶಮವಾಗುತ್ತದೆ. ಹೇಯ ಪದಾರ್ಥಗಳನ್ನು ತ್ಯಜಿಸುತ್ತಾನೆ. ಹಾಗೆ ಉಪಾದೇಯ ಸ್ವರೂಪ ಶುದ್ಧಾತ್ಮನನ್ನು ಗ್ರಹಣೆಮಾಡುತ್ತಾನೆ. ಈ ಅವಸ್ಥೆಯಿಂದ ಸಮ್ಯಕ್ಚಾರಿತ್ರದ ಪ್ರಾರಂಭವಾಗುವುದು. ಕ್ರಮವಾಗಿ ಚಾರಿತ್ರವು ಪೂರ್ಣಸಿದ್ಧಿಸುವಾಗ ಕೇವಲ ಜ್ಞಾನೋದಯ ಮತ್ತು ಶಿವಸುಖವು ಸಿದ್ಧಿಸುವುದು.

ಸ್ವಾಭಾವಿಕವಾಗಿ ಶುದ್ಧ ಆತ್ಮನಲ್ಲಿ ತನ್ಮಯನಾಗಿರಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಯ ಪ್ರಸಾದಾದ್ಧಿ ವದ ಪ್ರಭೋ! ಮೇ ।
ಸ್ವಾತ್ಮಾಸ್ವಭಾವಾತ್ ಸ್ವಪದೇ ಪ್ರತಿಷ್ಠೇತ್ ॥

ಅರ್ಥ :- ಹೇ ಸ್ವಾಮಿನ್ ! ಈ ಜೀವನು ಯಾವುದರ ಪ್ರಸಾದದಿಂದ ಸ್ವಾಭಾವಿಕವಾಗಿ ಪರಿಶುದ್ಧನಾದ ಆತ್ಮನಲ್ಲಿ ಲೀನನಾಗಿರಲು ಕಾರಣವೇನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ನಿಜಾನ್ಯವೇದೀ ಚ ದಯಾರ್ದ್ರಚಿತ್ತೋ ।
ಯಃ ಪೂರ್ವತೋ ವಾ ಸುಸಮಾಧಿನಿಷ್ಠಃ ॥
ಚಾರಿತ್ರಮೋಹಾದಿ ವಿಶೇಷ ನಾಶಾತ್ ।
ಸ್ವಾತ್ಮಾ ಸ್ವಭಾವಾತ್ಸ್ವಪದೇ ಪ್ರತಿಷ್ಠೇತ್ ॥೯೦॥

ಅರ್ಥ :- ತನ್ನಾತ್ಮನ ಅನ್ಯಜೀವಗಳ ಮತ್ತು ಪುದ್ಗಲಾದಿಗಳ ಸ್ವರೂಪವನ್ನು ತಿಳಿಯುವವನ ಹೃದಯವು ಸದಾಕಾಲ ದಯಾರಸದಿಂದ ತುಂಬಿರುತ್ತದೆ. ಮಾತ್ರವಲ್ಲ; ಪೂರ್ವಜನ್ಮದ ಸುಸಂಸ್ಕಾರಗಳಾದ ಸಮಾಧಿ; ಧ್ಯಾನಗಳ ಫಲವಾಗಿ ಆತ್ಮನು ಚಾರಿತ್ರ ಮೋಹನೀಯ ಕರ್ಮಗಳ ವಿಶೇಷ ನಾಶದಿಂದಲೇ ಸ್ವಾಭಾವಿಕವಾಗಿ ತನ್ನಾತ್ಮನ ಶುದ್ಧಸ್ವರೂಪದಲ್ಲಿ ತನ್ಮಯನಾಗುತ್ತಾನೆ.

ಭಾವಾರ್ಥ :- ತನ್ನಾತ್ಮಸ್ವರೂಪದಲ್ಲಿ ತನ್ಮಯನಾಗಲು ಸಮ್ಯಗ್ದರ್ಶನವು ಅತ್ಯಾವಶ್ಯಕವು. ಅದಿಲ್ಲದೆ ಸಮ್ಯಗ್ ಜ್ಞಾನವು ಉಂಟಾಗಲಾರದು. ಅಷ್ಟೇ ಅಲ್ಲ; ಪರಪದಾರ್ಥಗಳ ಜ್ಞಾನವು ಉಂಟಾಗುವುದಿಲ್ಲವು. ಸಮ್ಯಗ್ದರ್ಶನವಿಲ್ಲದೆ ಜೀವದಯೆಯು ಕೂಡಾ ಸಿದ್ಧಿಸಲಾರದು. ಶುಭಧ್ಯಾನದ ವಿಷಯವನ್ನು ಕೇಳಬೇಕೇ ? ಸಮ್ಯಗ್ದರ್ಶನಪೂರ್ವಕ ಮೇಲೆ ಹೇಳಿದ ಸಕಲಸಾಮಗ್ರಿಗಳು ಪ್ರಾಪ್ತವಾಗಿ ಚಾರಿತ್ರಮೋಹನೀಯ ಕರ್ಮದ ವಿಶೇಷಕ್ಷಯವು ಆಗುವುದು. ಆವಾಗ ಈ ಆತ್ಮನು ಸ್ವಾಭಾವಿಕವಾಗಿಯೆ ತನ್ನಲ್ಲಿ ತನ್ಮಯನಾಗುತ್ತಾನೆ. ಈ ಮೋಹನೀಯ ಕರ್ಮವು ಜೀವನಿಗೆ ತನ್ನಲ್ಲಿ ಸ್ಥಿರನಾಗಲು ಸಮ್ಮತಿಸುವುದಿಲ್ಲವು. ಎಷ್ಟರವರೆಗೆ ದರ್ಶನ ಮೋಹನೀಯ ಮತ್ತು ಚಾರಿತ್ರ ಮೋಹನೀಯ ಈ ಎರಡು ವಿಧವಾದ ಮೋಹನೀಯವು ನಾಶವಾಗುವಾಗಲೇ ತನ್ನಲ್ಲಿ ತಾನು ಸ್ಥಿರನಾಗಿ ಆತ್ಮನ ಯಥಾರ್ಥಸ್ವರೂಪ ಮೋಕ್ಷಸುಖವನ್ನು ಪಡೆಯುತ್ತಾನೆ.

ಮುಂದಕ್ಕೆ ಶುದ್ಧಾಶುದ್ಧ ನಿಶ್ಚಯನಯದಿಂದ ಸಪ್ತತತ್ವಗಳನ್ನು ನಿರೂಪಿಸುತ್ತ ಎಲ್ಲ ತತ್ವಗಳಿಂದ ಸರ್ವಥಾ ಭಿನ್ನನೆಂದು ಸ್ಪಷ್ಟಪಡಿಸುತ್ತಾರೆ.



ಚಿನ್ಮಾತ್ರಮೂರ್ತಿಃ ಪರಮಾರ್ಥದೃಷ್ಟ್ಯಾ ।
ರಾಗಾದಿಕರ್ತಾ ವ್ಯವಹಾರದೃಷ್ಟ್ಯಾ ॥
ಜ್ಞಾತ್ವೇತಿ ಪೂರ್ವೋಕ್ತ ಚಿದಾತ್ಮಚಿನ್ಹಂ ।
ಚಿನ್ಮಾತ್ರ ಮೂರ್ತಿರ್ಭವತಾನ್ಮಮಾತ್ಮಾ ॥೯೨॥

ಅರ್ಥ :- ಈ ಜೀವನು ಶುದ್ಧನಿಶ್ಚಯನಯದಿಂದ ಅತ್ಯಂತ ಶುದ್ಧ ಚೈತನ್ಯಸ್ವರೂಪನಾಗಿರುತ್ತಾನೆ. ವ್ಯವಹಾರನಯದೃಷ್ಟಿಯಿಂದ ರಾಗದ್ವೇಷಾದಿ ವಿಭಾವ ಪರಿಣಾಮಗಳ ಕರ್ತೃವಾಗಿರುತ್ತಾನೆ. ಈ ರೀತಿಯಾಗಿ ಶುದ್ಧಾಶುದ್ಧ ನಿಶ್ಚಯನಯದಿಂದ ವಿವರ್ಣಿಸುವ ಚೈತನ್ಯಸ್ವರೂಪ ಆತ್ಮನ ಚಿನ್ಹೆಗಳೆಂದು ತಿಳಿದು ತಾನೂ ಶುದ್ಧ ಚೈತನ್ಯಸ್ವರೂಪನಾಗಿ ಭಾವಿಸುವನು.

ಭಾವಾರ್ಥ :- ಈ ಜೀವನು ಅನಾದಿ ಕಾಲದಿಂದ ಕರ್ಮಗಳ ಬಲೆಯಲ್ಲಿ ಸಿಲುಕಿ ನಾನಾಪ್ರಕಾರ ಶರೀರಗಳನ್ನು (ಸ್ವರ್ಗ, ತಿರ್ಯಂಚ, ಮನುಷ್ಯ ನರಕಾದಿಗಳಲ್ಲಿ) ಧರಿಸುತ್ತಾನೆ. ನಾಲ್ಕೂಗತಿಗಳಲ್ಲಿ ಸುತ್ತಿಕೊಂಡಿರುತ್ತಾನೆ. ಅಲ್ಲಿ ನಾನಾವಿಧ ಕಾರ್ಯಗಳನ್ನು ಮಾಡಿಕೊಂಡಿರುತ್ತಾನೆ. (ಒಂದೊಂದು ಸರ್ತಿ, ಊಟ, ಯಾತ್ರೆ, ಪರರಿಗೆ ಉಪದ್ರವ, ಪರರ ಮೇಲೆ ಭಾರ) ಈ ಎಲ್ಲ ಕ್ರಿಯೆಗಳು ಶರೀರದ ಮೂಲಕವಾಗುತ್ತದೆ. ಆದರೂ ಇವನ್ನು ಮಾಡಿಸುವವನು ಜೀವವು. ಆದ್ದರಿಂದ ವ್ಯವಹಾರದೃಷ್ಟಿಯಿಂದ ಘಟಪಟಾದಿಗಳ ಕರ್ತೃವೆಂದು ಹೇಳಿಸಿಕೊಳ್ಳುವನು. ಅಶುದ್ಧ ನಿಶ್ಚಯನಯದಿಂದ ವಿಚಾರಿಸಿದರೂ ಎಲ್ಲ ಕ್ರಿಯೆಗಳು ಶರೀರದ ಮೂಲಕವೇ ಆಗುತ್ತವೆ. ಆತ್ಮನಾದರೋ ರಾಗ, ದ್ವೇಷ, ಕ್ರೋಧ, ಮಾನ, ಮಾಯಾ, ಲೋಭ ಮೊದಲಾದ ವಿಕಾರಗಳನ್ನು ಉಂಟು ಮಾಡುವವನಾಗಿರುತ್ತಾನೆ. ಇದರಿಂದ (ಆತ್ಮ) ಕ್ರಿಯೆಗಳಾಗುತ್ತವೆ. ಜೀವವು ರಾಗ ದ್ವೇಷಗಳ ಕರ್ತೃವು. ಹಾಗೆ ಶುದ್ಧನಿಶ್ಚಯನಯದಿಂದ ವಿಚಾರಿಸುವುದಾದರೆ ಈ ಆತ್ಮನು ಶುದ್ಧಸ್ವರೂಪನಾಗಿರುವುದರಿಂದ ಶುದ್ಧಭಾವಗಳ ಕರ್ತೃವಾಗಿರುತ್ತಾನೆ. ಅಶುದ್ಧಭಾವಗಳ ಕರ್ತೃವಲ್ಲ; ಹೀಗೆ ಈ ಜೀವವನ್ನು ಶುದ್ಧ, ಅಶುದ್ಧ ಅಥವಾ ವ್ಯವಹಾರದೃಷ್ಟಿಯಿಂದ ಕರ್ತೃವೆಂದು ಹೇಳಿರುವಂತೆ ಈ ಮೂರು ನಯ ದೃಷ್ಟಿಯಿಂದ ಭೋಕ್ತೃವೆಂದೂ ತಿಳಿಯತಕ್ಕದ್ದು. ವ್ಯವಹಾರದೃಷ್ಟಿಯಿಂದ ಶ್ವಾಸೋಚ್ಛ್ವಾಸ ಮುಂತಾದ ಹತ್ತು ಪ್ರಾಣಗಳಿಂದ ಜೀವಿಸಿಕೊಂಡಿರುತ್ತಾನೆ.

ನಿಶ್ಚಯದೃಷ್ಟಿಯಿಂದ ಚೈತನ್ಯಪ್ರಾಣಗಳಿಂದ ಜೀವಿಸಿಕೊಂಡಿರುತ್ತಾನೆ. ವ್ಯವಹಾರದೃಷ್ಟಿಯಿಂದ ಚಕ್ಷು, ಅಚಕ್ಷು ಮತ್ತು ಅವಧಿ ದರ್ಶನಗಳನ್ನು, ಮತಿ, ಶ್ರುತ, ಅವಧಿ, ಮನಃ ಪರ್ಯಾಯ, ಕುಮತಿ, ಕುಶ್ರುತಿ, ಕುಅವಧಿಜ್ಞಾನಗಳನ್ನು ಧಾರಣೆಮಾಡುತ್ತಾನೆ. ಮತ್ತೆ ನಿಶ್ಚಯದಿಂದ ಸಿದ್ಧಸಮಾನನಾಗಿರುವನೆಂಬುದನ್ನು ಭಿನ್ನಭಿನ್ನ ನಯಗಳಿಂದ ಜೀವನು ನಾನಾವಿಧವಾಗಿರುವನೆಂದು ಸಿದ್ಧವಾಗುತ್ತದೆ. ಈ ಎಲ್ಲ ದೃಷ್ಟಿಯಿಂದ ವಿಚಾರಿಸಿಕೊಂಡು ತನ್ನಾತ್ಮನನ್ನು ಸಿದ್ಧನನ್ನಾಗಿ ಮಾಡಿಕೊಳ್ಳುವ ಪ್ರಯತ್ನದಲ್ಲಿರಬೇಕು. ಕಾರಣ ಆತ್ಮನು ಶುದ್ಧವಾದೊಡನೆ ಸಂಸಾರ ಸಂಬಂಧ ಸಕಲ ವ್ಯಾಧಿಗಳು ಮತ್ತು ನಾಲ್ಕು ಗತಿ ಸಂಬಂಧ ಪರಿಭ್ರಮಣತೆಯು ದೂರಾಗುವವು. ಶುದ್ಧನಾಗುವಾಗ ಎಲ್ಲ ವಿಕಾರಗಳು ನಷ್ಟವಾಗುತ್ತವೆ. ಆಗ ಆತ್ಮನು ಶುದ್ಧಬ್ರಹ್ಮಾನಂದಮಯ, ಪರಬ್ರಹ್ಮ ಅವಸ್ಥೆಯನ್ನು ಪಡೆಯುವನು ಆಮೇಲೆ ಎಂದಿಗೂ ಸಂಸಾರ ಜಂಜಾಟಗಳಿಗೆ ಸಿಲುಕಲಾರನು. ಅನಂತಾ ನಂತ ಕಾಲದವರೆವಿಗೂ ಅನಂತ ಸುಖ ಸ್ವರೂಪನಾಗಿಯೇ ಇದ್ದುಬಿಡುತ್ತಾನೆ. ನಾನು ಕೂಡಾ ಚಿದಾನಂದಮಯ ಅವಸ್ಥೆಯನ್ನು ಪಡೆಯುವನೆಂದು ಸದಾ ಕಾಲವು ಭಾವಿಸಿಕೊಂಡಿರುತ್ತೇನೆ.

ಇನ್ನು ಮುಂದಕ್ಕೆ ಅಜೀವ ಪದಾರ್ಥಗಳನ್ನು ವಿವರಿಸುತ್ತ ಅವೆಲ್ಲವುಗಳಿಂದ ತನ್ನಾತ್ಮನು ಭಿನ್ನನೆಂದು ಸ್ಪಷ್ಟೀಕರಿಸುತ್ತಾರೆ.

ಧರ್ಮೋಽಪ್ಯಧರ್ಮೋಽಸ್ತಿ ನಭಶ್ಚ ಕಾಲೋ ।
ಹ್ಯಜೀವ ರೂಪೋ ಭುವಿ ಪುದ್ಗಲೋಽಪಿ ॥
ನಾ ಜೀವ ರೂಪೋಽಪಿ ಕದಾ ಭವಾಮಿ ।
ಚಿನ್ಮಾತ್ರ ಮೂರ್ತಿಃ ಖಲು ಕಿಂತು ಶುದ್ಧಃ ॥೯೩॥

ಅರ್ಥ :- ಧರ್ಮ, ಅಧರ್ಮ, ಆಕಾಶ, ಕಾಲ, ಮತ್ತು ಪುದ್ಗಲ ಇವೈದು ಅಜೀವ ಪದಾರ್ಥಗಳಾಗಿವೆ. ಈ ನನ್ನ ಆತ್ಮನು ಎಂದಿಗೂ ಅಜೀವ ರೂಪನಾಗಲಾರನು. ಅಂತೂ ಸದಾ ಕಾಲವೂ ಶುದ್ಧ ಚೈತನ್ಯ ಸ್ವರೂಪನಾಗಿಯೆ ಇರುವನೆಂದು ಭಾವಿಸಿಕೊಂಡಿರುತ್ತೇನೆ.



ಭಾವಾರ್ಥ :- ಆಕಾಶವು ಅನಂತವಾಗಿರುತ್ತದೆ. ಇದರ ಮಧ್ಯದಲ್ಲಿ ಲೋಕಾಕಾಶವಿದೆ. ಅದು ಘನವಾತ, ಘನೋದಧಿವಾತ, ಮತ್ತು ತನುವಾತಗಳ ಆಧಾರದಲ್ಲಿರುತ್ತದೆ. ಈ ಲೋಕಾಕಾಶದಲ್ಲಿಯೇ ಧರ್ಮ, ಅಧರ್ಮ, ದ್ರವ್ಯಗಳು ತುಂಬಿಹೋಗಿರುತ್ತವೆ. ಎಷ್ಟು ಲೋಕಾಕಾಶ ಪ್ರದೇಶಗಳಿವೆಯೋ ಅಷ್ಟೇ ಕಾಲಾಣುಗಳಿವೆ; ಅನಂತಾನಂತ ಜೀವಗಳಿಗೆ ಮತ್ತು ಅವುಗಳಗಿಂತಲು ಅನಂತಾನಂತ ಪುದ್ಗಲಗಳೂ ಕೂಡಾ ಇರುತ್ತವೆ. ಇವುಗಳಲ್ಲಿ ಜೀವ ಮತ್ತು ಪುದ್ಗಲಗಳೆರಡು ಪದಾರ್ಥಗಳು ಕ್ರಿಯಾಶೀಲಗಳಾಗಿರುತ್ತವೆ. ಅರ್ಥಾತ್ ಇವುಗಳಲ್ಲಿ ಚಲನಶಕ್ತಿಯಿರುತ್ತದೆ. ಜೀವದಲ್ಲಿ ಮಾತ್ರ ಚಲನ ಶಕ್ತಿಯು ಪ್ರತ್ಯಕ್ಷ ಗೋಚರಿಸುತ್ತದೆ. ಹಾಗೆ ಪುದ್ಗಲದಲ್ಲಿಯೂ ಕೂಡಾ ವಾಯು, ವಿದ್ಯುತ್ ಮೊದಲಾದವುಗಳಲ್ಲಿ ಗೋಚರವಾಗುತ್ತದೆ. ಜೀವಗಳಲ್ಲಿ ಚಲನಾದಿಕ್ರಿಯೆಗಳು ಇರುವಂತೆ, ಭಾರೀಪುದ್ಗಲಗಳು ಚಲಿಸುವುದಿಲ್ಲವು. ಆದರೆ ಆ ಪದಾರ್ಥಗಳು ಲಘುವಾದನಂತರ ಚಲಿಸಲು ಪ್ರಾರಂಭಿಸುತ್ತವೆ. ಹೇಗೆಂದರೆ ಮರದ ತುಂಡು ಚಲಿಸುವುದಿಲ್ಲವು. ಆದರೂ ಸುಟ್ಟನಂತರ ಅದರ ಕೆಲವು ಪರಮಾಣುಗಳು ಹಾರಿಹೋಗುತ್ತವೆ. ಯಾವುದರಲ್ಲಿ ರೂಪ, ರಸ, ಗಂಧ, ಸ್ಪರ್ಶಗುಣಗಳಿವೆಯೋ ಅವೆಲ್ಲವುಗಳಿಗೆ ಪುದ್ಗಲವೆಂದು ಹೇಳುತ್ತಾರೆ. ಪೃಥ್ವೀ, ಜಲ, ಅಗ್ನಿ, ವಾಯು, ಶಬ್ದ ಮುಂತಾದವು ಪುದ್ಗಲಗಳೇ ಆಗಿರುತ್ತವೆ. ಇವುಗಳಲ್ಲಿ ಸೂಕ್ಷ್ಮ ಮತ್ತು ಸ್ಥೂಲರೀತಿಯಾಗಿ ರೂಪಾದಿ ನಾಲ್ಕು ಗುಣಗಳು ಕಂಡುಬರುತ್ತವೆ. ವಾಯುವಿನಲ್ಲಿ ರೂಪವು ಕಂಡುಬರದಿದ್ದರೂ, ಯಾವಾಗ ಎರಡುವಿಧದ ವಾಯುಗಳು ಸಮ್ಮಿಶ್ರಣವಾಗುವಾಗ ಜಲ ಉಂಟಾಗುತ್ತದೆ. ಆಗ ಅದರಲ್ಲಿ ರೂಪವು ದೃಷ್ಟಿಗೆ ಗೋಚರವಾಗುತ್ತದೆ. ಒಂದುವೇಳೆ ವಾಯುವಿನಲ್ಲಿ ರೂಪವಿಲ್ಲದಿದ್ದರೆ ನೀರಿನಲ್ಲಿ ರೂಪವೆಲ್ಲಿಂದ ? ಇದರಿಂದ ವಾಯುವಿನಲ್ಲಿ ರೂಪವಿರುವುದೆಂದು ಸಿದ್ಧವಾಗುತ್ತದೆ. ಈ ಪ್ರಕಾರ ಎಲ್ಲ ವಸ್ತುಗಳನ್ನೂ ತಿಳಿಯಬೇಕು. ಜೀವ ಮತ್ತು ಪುದ್ಗಲಗಳ ಗಮನಕ್ಕೆ ಧರ್ಮದ್ರವ್ಯವು, ನಿಲ್ಲುವುದಕ್ಕೆ ಅಧರ್ಮ ದ್ರವ್ಯವು, ಎಲ್ಲ ಪದಾರ್ಥಗಳು ನಿಲ್ಲಲು ಸ್ಥಾನವನ್ನೀಯುವುದಕ್ಕೆ ಆಕಾಶದ್ರವ್ಯವು ಹಾಗೆ ಎಲ್ಲ ಪದಾರ್ಥಗಳ ಅವಸ್ಥೆಯನ್ನು ಪರಿವರ್ತಿಸುವುದಕ್ಕೆ ಕಾಲದ್ರವ್ಯವು ಸಹಾಯಕಗಳಾಗಿವೆ. ಈ ಪ್ರಕಾರ ಧರ್ಮ, ಅಧರ್ಮ, ಆಕಾಶ, ಕಾಲ ಮತ್ತು ಪುದ್ಗಲ ಐದು ತತ್ವಗಳು ಅಜೀವಗಳಾಗಿವೆ.

ಇವೆಲ್ಲವುಗಳಿಂದ ಜೀವತತ್ತ್ವವು ಸರ್ವಥಾ ಭಿನ್ನವಾಗಿರುತ್ತದೆ. ಇದು ಚೈತನ್ಯಸ್ವರೂಪವೂ, ಜ್ಞಾನದರ್ಶನ ಮಯವೂ ಆಗಿರುತ್ತದೆ. ಐದು ತತ್ತ್ವಗಳು ಜ್ಞೇಯ ದೃಶ್ಯಗಳಾಗಿರುತ್ತವೆ. ಆದ್ದರಿಂದ ನನ್ನ ಆತ್ಮನು ಅಜೀವನಾಗಿ ಪರಿವರ್ತಿಸಲಾರನು. ನನ್ನ ಆತ್ಮನು ಚೈತನ್ಯಸ್ವರೂಪಿಯೂ, ರತ್ನತ್ರಯಮಯನೂ, ಉತ್ತಮ ಕ್ಷಮಾದಿ ಹತ್ತು ವಿಧ ಧರ್ಮಮೂರ್ತಿಯೂ, ಸಂಪೂರ್ಣ ಚಾರಿತ್ರಲಕ್ಷಣನೂ ಮತ್ತು ಕರ್ಮಗಳಿಂದ ರಹಿತನೂ, ಅತ್ಯಂತ ಶುದ್ಧಸ್ವರೂಪನೂ ಆಗಿರುತ್ತಾನೆ. ಇಂತಹ ನನ್ನ ಆತ್ಮನು ಸದಾಕಾಲವು ಹಾಗೆಯೇ ಇರಲಿ, ಅನಂತ ಕಾಲದವರೆವಿಗೂ ಅನಂತ ಸುಖ ಮಯನಾಗಲೆಂದು ಭಾವಿಸುತ್ತ ಇರುತ್ತೇನೆ.

ಮುಂದಕ್ಕೆ ಆಸ್ರವ ತತ್ತ್ವನಿರೂಪಣೆಗೈಯುತ್ತ ನನ್ನಾತ್ಮನು ಅದರಿಂದ ಸರ್ವಥಾ ಭಿನ್ನನೆಂದು ಸ್ಪಷ್ಟೀಕರಿಸುತ್ತಾರೆ.

ಅಶುದ್ಧಜೀವಸ್ಯ ಚ ಪುದ್ಗಲಸ್ಯ ।<br>
ಸಮಾಗಮಾದಾಸ್ರವತತ್ತ್ವಜನ್ಮ ॥<br>
ನಾಶುದ್ಧಜೀವೋಽಸ್ಮಿ ನ ಪುದ್ಗಲೋಽಸ್ಮಿ ।<br>
ಭಿನ್ನಸ್ತತಶ್ಚಾಸ್ರವ ತತ್ತ್ವತೋಽಹಮ್ ॥೧೯೪॥

ಅರ್ಥ :- ಅಶುದ್ಧಜೀವ ಮತ್ತು ಅಶುದ್ಧಪುದ್ಗಲಗಳ ಸಂಯೋಗದಿಂದ ಆಸ್ರವತತ್ತ್ವವು ಉತ್ಪನ್ನವಾಗುತ್ತದೆ. ಈ ನನ್ನ ಆತ್ಮನು ಅಶುದ್ಧಸ್ವರೂಪನೂ ಅಲ್ಲ, ಅಶುದ್ಧಪುದ್ಗಲರೂಪನೂ ಅಲ್ಲ. ಆದ್ದರಿಂದ ಆಸ್ರವ ತತ್ತ್ವದಿಂದ ನನ್ನ ಆತ್ಮನು ಸರ್ವಥಾ ಭಿನ್ನನೂ ಆಗಿರುತ್ತಾನೆ.

ಭಾವಾರ್ಥ :- ಕರ್ಮಗಳು ಬರುವದ್ವಾರಕ್ಕೆ ಆಸ್ರವವೆಂದು ಹೆಸರು. ಅಥವಾ ಯಾವ ಕಾರಣಗಳಿಂದ ಮನ, ವಚನ, ಕಾಯಗಳ ಕ್ರಿಯಾರೂಪ ಯೋಗಗಳಿಗೂ ಆಸ್ರವವೆಂದು ಹೇಳುತ್ತಾರೆ. ಅಥವಾ ಮಿಥ್ಯಾದರ್ಶನ, ಅವಿರತ ಪ್ರಮಾದ ಯೋಗಗಳು ಬಂಧದ ಕಾರಣಗಳಿಗೆ ಆಸ್ರವವೆಂದೂ ಹೇಳುತ್ತಾರೆ. ಈ ಆಸ್ರವವು ಅಶುದ್ಧಜೀವ, ಅಶುದ್ಧಪುದ್ಗಲಗಳಿಂದಲೇ ಆಗುವುದು. ಅಶುದ್ಧ ಜೀವಗಳ ಪರಿಣಾಮವು ರಾಗದ್ವೇಷಗಳಿಂದ ತುಂಬಿರುವ ಕಾರಣದಿಂದ ಕಾರ್ಮಣವರ್ಗಣೆಗಳು ಆತ್ಮನೊಡನೆ ಸೇರಿ ಬಂಧವಾಗುತ್ತವೆ. ಕರ್ಮ



ರೂಪ ಪರಿಣಾಮವಾಗುವುದೇ ಆಸ್ರವವು. ರಾಗದ್ವೇಷರೂಪ ಪರಿಣಾಮಗಳು ಯೋಗ ಕ್ರಿಯಾತ್ಮಕವಾಗಿರುವುದರಿಂದ ಯೋಗವು ಕೂಡ ಆಸ್ರವವೆಂದೇ ಹೇಳಿಸಿಕೊಳ್ಳುವುದು. ರಾಗದ್ವೇಷರೂಪಪರಿಣಾಮಗಳು ಕೂಡಾ ಭಾವಾಸ್ರವವು, ಆ ರಾಗ ದ್ವೇಷಾದಿಗಳು ಪೌದ್ಗಲಿಕ ರೂಪವಾಗಿಯೂ, ಮನ, ವಚನ ಕಾಯಗಳ ಕ್ರಿಯೆ ಪುದ್ಗಲರೂಪವೇ ಆಗಿರುತ್ತದೆ. ಈ ಪ್ರಕಾರ ಆಸ್ರವ ತತ್ತ್ವವು ರಾಗದ್ವೇಷಾದಿಗಳು ಅಶುದ್ಧಜೀವ ಮತ್ತು ಅಶುದ್ಧಪುದ್ಗಲಗಳಿಂದುತ್ಪನ್ನವಾಗುತ್ತದೆ. ಆದರೆ ನನ್ನ ಈ ಶುದ್ಧಸ್ವರೂಪ ಆತ್ಮನು ಮನ, ವಚನ, ಕಾಯಗಳ ಕ್ರಿಯಾರೂಪ ಪರಿಣತನಾಗಿಯೂ, ರಾಗದ್ವೇಷರೂಪಪರಿಣತನಾಗಿಯೂ ಆಗುವುದಿಲ್ಲವು. ಕರ್ಮಗಳನ್ನು ಗ್ರಹಣೆಮಾಡುವುದೂ ಇಲ್ಲವು. ಆದ್ದರಿಂದ ನನ್ನ ಶುದ್ಧ ಆತ್ಮನು ಮೋಕ್ಷಸ್ವರೂಪನೇ ಆಗಿರುತ್ತಾನೆ. ಹೀಗೆ ಭಾವನೆಗಳನ್ನು ಭಾವಿಸುವುದೇ ಶುದ್ಧೋಪಯೋಗವಾಗಿರುತ್ತದೆ.

ಮುಂದಕ್ಕೆ ಬಂಧತತ್ತ್ವವರ್ಣಿಸುತ್ತ ಅದರಿಂದ ಆತ್ಮನು ಸರ್ವಥಾ ಭಿನ್ನನೆಂದು ಸ್ಪಷ್ಟೀಕರಿಸುತ್ತಾರೆ.

ಅಶುದ್ಧ ಜೀವಸ್ಯ ಚ ಪುದ್ಗಲಸ್ಯ ।<br>
ಬಂಧೋ ಮಿಥಃ ಸ್ಯಾನ್ನಯಮಾನಸಿದ್ಧಃ ॥<br>
ನಾಽಶುದ್ಧ ಜೀವೋಽಸ್ಮಿನ ಪುದ್ಗಲೋಽಸ್ಮಿ ।<br>
ಬಂಧಸ್ತತೋ ಮೇಚ ಕಥಂಸಮಂ ಸ್ಯಾತ್ ॥ ॥೧೯೫॥

ಅರ್ಥ :- ಅಶುದ್ಧಜೀವ ಮತ್ತು ಅಶುದ್ಧಪುದ್ಗಲಗಳ ಪರಸ್ಪರ ಸಂಯೋಗ, ಪ್ರಮಾಣನಯಗಳಿಂದ ಸಿದ್ಧವಾಗುವ ಬಂಧತತ್ತ್ವವು. ಆದರೆ ನಾನು ಅಶುದ್ಧಜೀವನಲ್ಲ, ಅಶುದ್ಧಪುದ್ಗಲವೂ ಅಲ್ಲ. ಹೀಗಿರುವಾಗ ನನ್ನೊಡನೆ ಬಂಧತತ್ತ್ವವು ಹೇಗಾಗುವುದು. ಅರ್ಥಾತ್ ಎಂದಿಗೂ ಆಗಲಾರದು.

ಭಾವಾರ್ಥ :- ಬಂಧತತ್ತ್ವವು ಸರ್ವಥಾ ಪುದ್ಗಲಸಂಬಂಧವಾದುದು. ಕಾರ್ಮಣ ವರ್ಗಣೆಗಳಿಲ್ಲದೆ ಬಂಧತತ್ತ್ವವಾಗಲಾರದು. ಯಾವಾಗ ಕಾರ್ಮಣ ವರ್ಗಣೆಗಳು ಕರ್ಮರೂಪಪರಿಣತವಾಗಿ ಆತ್ಮನ ಅಶುದ್ಧಪ್ರದೇಶಗಳೊಡನೆ ಸೇರಿಕೊಳ್ಳುವುದಕ್ಕೆ ಬಂಧವೆಂದು ಹೇಳುತ್ತಾರೆ. ಹಾಗೆಯೆ ಈ ಬಂಧವು ಯಾವ

ಪರಿಣಾಮಗಳಿಂದ ಆಗುವುವೋ ಆ ಪರಿಣಾಮಗಳೇ ಭಾವಬಂಧವು. ಈ ಭಾವವು ರಾಗದ್ವೇಷವಿಕಾರರೂಪವಾಗಿರುತ್ತದೆ. ಇದು ಕರ್ಮಗಳ ಉದಯದಿಂದಾಗುತ್ತದೆ. ಮಾತ್ರವಲ್ಲ; ಕರ್ಮವಿಶಿಷ್ಟಜೀವದಲ್ಲಿ ಆಗುತ್ತದೆ. ಆದುದರಿಂದ ಕಾರ್ಮಣವರ್ಗಣೆಗಳು ಪುದ್ಗಲಗಳಾಗಿವೆ. ಹೀಗೆ ಭಾವಬಂಧವಾಗಲೀ ದ್ರವ್ಯಬಂಧವಾಗಲೀ ಪುದ್ಗಲಗಳಿಂದೇ ಸಿದ್ಧವಾಗುತ್ತವೆ. ಆದರೆ ಈ ನನ್ನ ಶುದ್ಧಾತ್ಮನು ಭಾವಬಂಧರೂಪನೂ ಅಲ್ಲ, ದ್ರವ್ಯಬಂಧರೂಪನೂ ಅಲ್ಲ. ಇವೆರಡರಿಂದ ಸರ್ವಥಾ ಭಿನ್ನನೇ ಆಗಿರುತ್ತಾನೆ. ನನ್ನ ಆತ್ಮ ಶುದ್ಧ ಚೈತನ್ಯಸ್ವರೂಪನೂ, ಶುದ್ಧಜ್ಞಾನದರ್ಶನಮಯನೂ, ರತ್ನತ್ರಯ ಸ್ವರೂಪನೂ ಮತ್ತು ಸಕಲ ಪದಾರ್ಥಗಳ ಜ್ಞಾತೃವೂ ಆಗಿರುತ್ತಾನೆ. ಆದರೆ ಬಂಧತತ್ವವು ಜ್ಞಾತೃವೂ ಅಲ್ಲ, ದ್ರಷ್ಟನೂ ಅಲ್ಲ. ಹೀಗೆ ಶುದ್ಧಭಾವನೆಯನ್ನಿಟ್ಟುಕೊಳ್ಳುವುದು ಶುದ್ಧೋಪಯೋಗವೆಂದು ಹೇಳಿಸಿಕೊಳ್ಳುವುದು. ಈ ರೀತಿಯಾಗಿ ಶುದ್ಧೋಪಯೋಗವನ್ನು ಧಾರಣೆಮಾಡುವುದರಿಂದ ಕರ್ಮಗಳ ಬಂಧವು ಸರ್ವಥಾನಾಶವಾಗುತ್ತದೆ. ಮಾತ್ರವಲ್ಲ; ಮೋಕ್ಷಪ್ರಾಪ್ತಿಯು ಕೂಡಾ ಆಗುತ್ತದೆ.

ಇನ್ನು ಮುಂದಕ್ಕೆ ಸಂವರ ತತ್ವ ವರ್ಣಿಸುತ್ತ ತನ್ನ ಶುದ್ಧಾತ್ಮನು ಅದರಿಂದಲೂ ಸರ್ವಥಾ ಭಿನ್ನನೆಂದು ಸ್ಪಷ್ಟೀಕರಿಸುತ್ತಾರೆ.

ಮಿಥ್ಯಾತ್ವಭಾವಾದಿ ನಿರೋಧತಃ ಸ್ಯಾತ್ ।
ಸುಖಪ್ರದಂ ಸಂವರತತ್ವಜನ್ಮ ॥
ಚಿನ್ಮಾತ್ರಮೂರ್ತಿಃ ಪರಮಾರ್ಥತೋऽಸ್ಮಿ ।
ತತೋ ನ ಮೇ ಸಂವರತತ್ವಜನ್ಮ ॥೯೬॥

ಅರ್ಥ :- ಮಿಥ್ಯಾತ್ವ, ಅವಿರತ ಮೊದಲಾದ ಭಾವಗಳನ್ನು ತಡೆಯುವುದರಿಂದ ಸುಖವನ್ನೀಯುವ ಸಂವರತತ್ವದ ಉತ್ಪತ್ತಿಯಾಗುತ್ತದೆ. ಆದರೆ ಪರಮಾರ್ಥ ದೃಷ್ಟಿಯಿಂದ ವಿಚಾರಿಸುವಾಗ ನಾನು ಶುದ್ಧಚೈತನ್ಯ ಸ್ವರೂಪನಾಗಿದ್ದೇನೆ. ಹೀಗಿರುವಾಗ ಸಂವರತತ್ವವು ಹೇಗೆತಾನೆ ನನ್ನಲ್ಲಿ ಉಂಟಾದೀತು ?

ಭಾವಾರ್ಥ :- ಆಸ್ರವನಿರೋಧವೇ ಸಂವರತತ್ವವು. ಅದು ಭಾವಸಂವರೆಯಂದು; ದ್ರವ್ಯಸಂವರೆಯಂದು ಎರಡು ವಿಧವಾಗಿರುತ್ತದೆ. ಆತ್ಮನ



ಯಾವ ಪರಿಣಾಮಗಳಿಂದ ಆಸ್ರವವು ತಡೆಯಲ್ಪಡುವುದೋ ಅಥವಾ ಕರ್ಮಗಳ ಆಗಮನ(ಬರುವಿಕೆ)ವು ನಿಲ್ಲುವುದೋ ಆ ಪರಿಣಾಮಗಳಿಗೆ ಭಾವಸಂವರೆಯಂದೂ, ಆಸ್ರವದ ತಡೆಯುವುದಕ್ಕೆ ದ್ರವ್ಯಸಂವರೆಯಂದು ಹೇಳುತ್ತಾರೆ. ಈ ಎರಡುವಿಧ ಸಂವರೆಯು ಕರ್ಮವಿಶಿಷ್ಟ ಅಶುದ್ಧ ಆತ್ಮನಿಗೆ ಆಗುವುದು. ಕಾರಣ ಕರ್ಮಗಳ ಆಸ್ರವವು ಒಂದಿಲ್ಲೊಂದು ಕರ್ಮದ ಉದಯವಾದರೇನೆ ಆಗುವುದು. ಕರ್ಮಗಳ ಉದಯವಿಲ್ಲದೆ ಆಸ್ರವವಾಗಲು ಸಾಧ್ಯವಿಲ್ಲವು. ಅಂತಹ ಪುದ್ಗಲರೂಪ ಆಸ್ರವವನ್ನು ತಡೆಯುವುದರಿಂದ ಯಾವ ಸಂವರೆಯು ಆಗುವದೋ ಅದು ಪೌದ್ಗಲಿಕರೂಪವೆಂದು ಒಪ್ಪಬೇಕು. ಇಂತಹ ಸಂವರತತ್ವವು ಶುದ್ಧ ಆತ್ಮನಿಗೆ ಆಗುವುದಿಲ್ಲವು. ಯಾಕೆಂದರೆ ಶುದ್ಧಾತ್ಮನಲ್ಲಿ ರಾಗದ್ವೇಷರೂಪ ಆಸ್ರವವನ್ನುಂಟುಮಾಡುವ ಅಶುದ್ಧ ಭಾವಗಳು ಉಂಟಾಗದೆ ಇರುವುದರಿಂದ ಅಲ್ಲಿ ತಡೆಯ ಪ್ರಶ್ನೆಯೇ ಉಂಟಾಗುವುದಿಲ್ಲವು. ಇದರಿಂದ ಶುದ್ಧಾತ್ಮನಲ್ಲಿ ಸಂವರತತ್ವವು ಎಂದಿಗೂ ಉಂಟಾಗುವುದಿಲ್ಲವೆಂದು ಸಿದ್ಧವಾಗುವುದು. ಒಂದುವೇಳೆ ಪರಮಾರ್ಥದೃಷ್ಟಿಯಿಂದ ವಿಚಾರಿಸುವಾಗ ನನ್ನ ಆತ್ಮನೂ ಕೂಡಾ ಅತ್ಯಂತ ಶುದ್ಧನೂ, ಚೈತನ್ಯಸ್ವರೂಪನೂ, ಜ್ಞಾನದರ್ಶನಮಯನೂ ಮತ್ತು ಸಿದ್ಧಾತ್ಮಸಮಾನನೂ ಆಗಿರುತ್ತಾನೆ. ಆದ್ದರಿಂದ ಸಂವರತತ್ವವು ಸರ್ವಥಾ ಭಿನ್ನವಾಗಿರುವುದೆಂಬ ಪರಿಣಾಮವನ್ನಿಟ್ಟುಕೊಳ್ಳುವುದು ಶುದ್ಧೋಪಯೋಗವಾಗಿರುತ್ತದೆ.

ಮುಂದಕ್ಕೆ ನಿರ್ಜರಾತತ್ವಸ್ವರೂಪ ಸ್ಪಷ್ಟೀಕರಿಸುತ್ತ ತನ್ನಾತ್ಮನು ಸರ್ವಥಾ ಭಿನ್ನನೆಂದು ಹೇಳುತ್ತಾರೆ.

ಸದ್ದೃಷ್ಟಿಜೀವಾಚ್ಚ ಕುಪುದ್ಗಲಸ್ಯ ।
ವಿಯೋಗತೋ ನಿರ್ಜರತತ್ವಜನ್ಮ ॥
ಚಿದ್ರೂಪಮೂರ್ತಿಃ ಪರಮಾರ್ಥತೋऽಸ್ಮಿ ।
ತತೋ ನ ಮೇ ನಿರ್ಜರತತ್ವಜನ್ಮ ॥೯೭॥

ಅರ್ಥ :- ಸಮ್ಯಗ್ದೃಷ್ಟಿಯ ಕರ್ಮರೂಪ ಪುದ್ಗಲ ವರ್ಗಣೆಗಳ ನಾಶವಾಗುವುದು. ಅಥವಾ ಆ ಆತ್ಮನಿಂದ ಎಲ್ಲ ಕರ್ಮಗಳು ಉದುರಿಹೋಗುವು

ದಕ್ಕೆ ನಿರ್ಜರಾತತ್ವವೆಂದು ಹೇಳುತ್ತಾರೆ. ನನ್ನ ಶುದ್ಧ ಆತ್ಮನು ಪರಮಾರ್ಥ ದೃಷ್ಟಿಯಿಂದ ಶುದ್ಧ ಚೈತನ್ಯರೂಪನಾಗಿರುವುದರಿಂದ ನನ್ನಿಂದ ಉತ್ಪನ್ನ ವಾಗಲಾರನು.

ಭಾವಾರ್ಥ :- ಕರ್ಮಗಳ ಏಕದೇಶಕ್ಷಯಕ್ಕೆ ನಿರ್ಜರೆಯೆಂದು ಹೆಸರು. ಅದು ಭಾವನಿರ್ಜರೆ, ದ್ರವ್ಯನಿರ್ಜರೆ ಎಂದು ಎರಡು ವಿಧವಾಗಿರುತ್ತದೆ. ಆತ್ಮನ ಯಾವ ಪರಿಣಾಮಗಳಿಂದ ನಿರ್ಜರೆಯಾಗುವುದೋ ಅದು ಭಾವನಿರ್ಜರೆಯು ಯಾವ ಕರ್ಮಗಳ ಕ್ಷಯವಾಗುವುದಕ್ಕೆ ದ್ರವ್ಯನಿರ್ಜರೆಯು ಅಥವಾ ಅದರಲ್ಲಿ ಸವಿಪಾಕನಿರ್ಜರೆ, ಅವಿಪಾಕನಿರ್ಜರೆ ಎಂದು ವಿಂಗಡಿಸುತ್ತಾರೆ. ಯಾವ ಯಾವ ಕರ್ಮವು ತಪಶ್ಚರಣಾದಿ ನಿಮಿತ್ತದಿಂದ ಫಲವೀಯದೆ ನಷ್ಟ(ಉದುರಿ) ವಾಗುವುದಕ್ಕೆ ಅವಿಪಾಕನಿರ್ಜರೆ ಎಂದು ಹೇಳುತ್ತಾರೆ. ಈ ಎಲ್ಲ ನಿರ್ಜರೆಗಳು ಪುದ್ಗಲರೂಪಗಳಾಗಿರುತ್ತವೆ. ಕಾರಣ ದ್ರವ್ಯನಿರ್ಜರೆಯಲ್ಲಾದರೋ ಕರ್ಮಗಳ ನಾಶವು, ಭಾವನಿರ್ಜರೆಯಲ್ಲೂ ಅಶುದ್ಧಜೀವನಿಗೇನೇ ಆಗುತ್ತದೆ. ಕರ್ಮ ಸಹಿತ ಜೀವಗಳಿಗೆ ಭಾವನಿರ್ಜರೆಯು, ಕರ್ಮವಿಶಿಷ್ಟಜೀವಗಳ ಪರಿಣಾಮವು ಕರ್ಮ ನಿಮಿತ್ತದಿಂದಲಾಗುವುದು. ಪುದ್ಗಲರೂಪಗಳೂ ಆಗಿರುತ್ತವೆ. ಈ ಪ್ರಕಾರವಾಗಿ ಎಲ್ಲ ವಿಧದ ನಿರ್ಜರೆಯು ಪೌದ್ಗಲಿಕವೇ ಎಂದು ಸಿದ್ಧವಾಗುವುದು. ಆದರೆ ಈ ನನ್ನ ಆತ್ಮನು ಶುದ್ಧ ಚಿದಾನಂದೈಕರೂಪ ನಾಗಿರುವುದರಿಂದ ನಿರ್ಜರಾತತ್ವವು ನನ್ನಿಂದ ಸರ್ವಥಾ ಭಿನ್ನವೇ, ನನ್ನ ಆತ್ಮನಿಂದ ನಿರ್ಜರೆಯು ಭಿನ್ನವಾಗಿ ಇರುತ್ತದೆ. ಈ ಪ್ರಕಾರ ಪರಿಣಾಮವನ್ನಿಟ್ಟುಕೊಳ್ಳುವುದು ಶುದ್ಧೋಪಯೋಗವಾಗಿರುತ್ತದೆ.

ಮುಂದಕ್ಕೆ ಮೋಕ್ಷತತ್ವನಿರೂಪಿಸುತ್ತ ಆದರಿಂದಲೂ ನನ್ನ ಆತ್ಮನು ಸರ್ವಥಾ ಭಿನ್ನನೆಂದು ಸ್ಪಷ್ಟೀಕರಿಸುತ್ತಾರೆ.

ನಿರ್ಗ್ರಂಥಸಾಧೋರ್ಭುವಿ ಪುದ್ಗಲಸ್ಯ ।
ಮೋಕ್ಷಃ ಕಿಲಾತ್ಯಂತ ವಿಯೋಗತಃ ಸ್ಯಾತ್ ॥
ಚಿದ್ರೂಪಮೂರ್ತೇರ್ನಚ ಮೇ ವಿಯೋಗಃ ।
ಸಂಯೋಗವಾರ್ತಾಕ್ರಿಯತೇ ಕಥಂ ಹಿ ॥೯೮॥



ಅರ್ಥ :- ವೀತರಾಗ ನಿರ್ಗ್ರಂಥ ಗುರುಗಳ ಕರ್ಮರೂಪ ಪುದ್ಗಲಗಳ ಸಂಪೂರ್ಣ ವಿಯೋಗವಾಗುವುದೇ ಮೋಕ್ಷವು. ನನ್ನ ಆತ್ಮನು ಶುದ್ಧಚೈತನ್ಯ ಸ್ವರೂಪನಾಗಿರುವುದರಿಂದ ಯಾವ ಕರ್ಮಗಳ ವಿಯೋಗವಾಗುವ ಸಂಭವವೇ ಇರಲಾರದು. ಕಾರಣ ಶುದ್ಧಾತ್ಮನಲ್ಲಿ ಕರ್ಮಗಳ ಸಂಯೋಗವೇ ಇಲ್ಲವು. ಎಲ್ಲಿ ಕರ್ಮಗಳ ಸಂಯೋಗವಿಲ್ಲವೋ ಅಲ್ಲಿ ಕರ್ಮಗಳ ವಿಯೋಗ ವಿಚಾರ ಮಾಡುವ ಅವಶ್ಯಕತೆ ಇಲ್ಲವು.

ಭಾವಾರ್ಥ :- ಈ ಆತ್ಮನಿಂದ ಸಕಲ ಕರ್ಮಗಳ ನಾಶವಾಗುವುದೇ ಮೋಕ್ಷವು. ಆದು ಭಾವಮೋಕ್ಷವೆಂದು, ದ್ರವಮೋಕ್ಷವೆಂದು ಎರಡು ವಿಧವಾಗಿರುತ್ತದೆ. ಆತ್ಮನ ಯಾವ ಪರಿಣಾಮಗಳಿಂದ ಎಲ್ಲ ಕರ್ಮಗಳು ನಾಶವಾಗುವ ಪರಿಣಾಮಕ್ಕೆ ಭಾವಮೋಕ್ಷವೆಂದೂ, ಕರ್ಮಸಮೂಹವು ನಾಶ ವಾಗುವುದಕ್ಕೆ ದ್ರವ್ಯಮೋಕ್ಷವೆಂದೂ ಹೇಳುತ್ತಾರೆ. ಈ ಎರಡು ಪ್ರಕಾರದ ಮೋಕ್ಷವು ಕರ್ಮವಿಶಿಷ್ಟ ಆತ್ಮನಿಗೆ ಆಗುತ್ತದೆ. ಯಾವ ಆತ್ಮನು ಅತ್ಯಂತ ಪರಿಶುದ್ಧನೂ, ಕರ್ಮಗಳಿಂದ ಸರ್ವಥಾ ರಹಿತನೂ ಆಗಿರುವಾಗ ಯಾವುದರ ವಿಯೋಗವಾಗುವುದಿಲ್ಲವು. ಯಾವನಿಗೆ ಕರ್ಮಗಳೇ ಇಲ್ಲವೋ ಅಲ್ಲಿ ಯಾವುದರ ನಾಶವು? ಹಾಗೆ ನನ್ನ ಆತ್ಮನು ಸರ್ವಥಾ ಶುದ್ಧನೂ, ಕರ್ಮರಹಿತನೂ ಆಗಿರುವುದರಿಂದ ಮೋಕ್ಷತತ್ವವು ನನ್ನಿಂದ ಸರ್ವಥಾ ಭಿನ್ನವೇ ಆಗಿರುತ್ತದೆ. ಈ ಪ್ರಕಾರದ ಶುದ್ಧ ಭಾವನೆ ಶುದ್ಧೋಪಯೋಗವೆಂದು ಹೇಳಿಸಿಕೊಳ್ಳುವುದು.

ಮುಂದಕ್ಕೆ ಸಪ್ತತತ್ವ ಕಥನದ ಉಪಸಂಹಾರವು.

ತತ್ವಸ್ವರೂಪಂ ಕಥಿತಂ ಮಯೇತಿ ।
ತ್ಯಾಗಾಯ ಹೇಯಸ್ಯ ಚಿತೋಗ್ರಹಾಯ ॥
ಸಮಸ್ತತತ್ವಾನಿ ವಿವರ್ಜ್ಯಯೋಗಾತ್ ।
ಗೃಣ್ಹಾತು ಯೋಗೀಚ ನಿಜಾತ್ಮತತ್ವಂ ॥೯೯॥

ಅರ್ಥ :- ಹೇಯ ಪದಾರ್ಥಗಳ ತ್ಯಾಗಕ್ಕಾಗಿಯೂ, ಶುದ್ಧಚೈತನ್ಯರೂಪ ಆತ್ಮನ ಗ್ರಹಣಕ್ಕಾಗಿಯೂ, ಈ ಏಳು ತತ್ವಗಳ ನಿರೂಪಣೆ ಮಾಡಿರುತ್ತೇನೆ.